
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜೂನ್ 2016 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 09
ಪುಟ : 12
ಬೆಲೆ : ₹ 10/-




A Journal of Karnataka State Secondary Teachers' Association

# ಸಂಪಾದಕೀಯ

ಬೇಸಗೆಯ ಬಿಸಿಲ ಝಳ ಮುಗಿದು ಮಳೆ ವಾತಾವರಣದಲ್ಲಿ ತಂಪನ್ನು ತಂದಿದೆ. ಹಿತಕರವಾದ, ಆಹ್ಲಾದಮಯ ವಾತಾವರಣ ಜನರಲ್ಲಿ ಉತ್ಸಾಹ, ಹುಮ್ಮಸ್ಸನ್ನು ಹೆಚ್ಚಿಸಿ, ಹೆಚ್ಚು ಹೆಚ್ಚು ಕಾರ್ಯೋನ್ಮುಖ ರನ್ನಾಗಿಸುತ್ತದೆ. ಇಂತಹ ವಾತಾವರಣದಲ್ಲಿ ಶಿಕ್ಷಕ ಮಿತ್ರರು, ವಿದ್ಯಾರ್ಥಿಗಳು ಬೇಸಗೆಯ ರಜೆಯನ್ನು ಮುಗಿಸಿ ಶಾಲೆಯ ಚಟುವಟಿಕೆಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಎಲ್ಲಾ ಶಿಕ್ಷಕ ಬಂಧುಗಳಿಗೂ, ವಿದ್ಯಾರ್ಥಿಗಳಿಗೂ ಈ ಶೈಕ್ಷಣಿಕ ವರ್ಷಕ್ಕೆ ಶಿಕ್ಷಕ ಸಮಾಚಾರದ ಆತ್ಮೀಯವಾದ ಸ್ವಾಗತ. ಶಾಲೆಯಲ್ಲಿ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳೂ ಯಶಸ್ವಿಯಾಗಿ ನಡೆಯಲಿ ಎಂದು ಆಶಿಸೋಣ.

ಈ ವರ್ಷದ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಯ ಫಲಿತಾಂಶಗಳು ಕಳೆದ ವರ್ಷಕ್ಕಿಂತ ಸ್ವಲ್ಪ ಕಡಮೆಯಾಗಿದೆ. ಆದರೆ ಶಾಲೆಗಳ ಹಾಗೂ ವಿದ್ಯಾರ್ಥಿಗಳ ವೈಯುಕ್ತಿಕ ಸಾಧನೆಗಳಿಗೇನೂ ಕೊರತೆ ಇಲ್ಲ. ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರಿಕ್ಷಾ ಮಂಡಳಿಯ ಇತಿಹಾಸದಲ್ಲೇ ಮೊದಲ ಬಾರಿಗೆ ರಂಜನ್.ಎಸ್. ಎಲ್ಲಾ ವಿಷಯಗಳಲ್ಲೂ ಪೂರ್ಣಾಂಕಗಳನ್ನು ಗಳಿಸಿ ದಾಖಲೆಯನ್ನು ನಿರ್ಮಿಸಿದ್ದಾನೆ. ಶೇಕಡ 100 ಅಂಕಗಳನ್ನು ಪಡೆದಿರುವುದು ವಿಶೇಷವೇ ಸರಿ. ಈ ಅಪೂರ್ವ ಸಾಧನೆಗಾಗಿ ರಂಜನ್.ಎಸ್. ನನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಮುಂದಿನ ಪರೀಕ್ಷೆಗಳಲ್ಲೂ ರಂಜನ್ ಹೀಗೆಯೇ ಪೂರ್ಣಾಂಕಗಳನ್ನು ಗಳಿಸುತ್ತಾರೆಂಬ ಆಶಯ ನಮ್ಮದು. ರಂಜನ್ಗೆ ಶಿಕ್ಷಣ ನೀಡಿದ ಶಾಲೆ, ಹಾಗೂ ಅಧ್ಯಾಪಕರುಗಳನ್ನು ಶಿಕ್ಷಕ ಸಮಾಚಾರ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ರಂಜನ್‌ನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿರುವ ತಂದೆ ತಾಯಿಯರಿಗೆ ಶುಭಾಶಯಗಳು. ಅಂತೆಯೇ ಓದುವ ವಾತಾವರಣವಿಲ್ಲದಿದ್ದರೂ, ಮನೆಯ ಬಡತನ, ಕಷ್ಟಗಳನ್ನೆಲ್ಲಾ ಮೆಟ್ಟಿ ನಿಂತು ಒಳ್ಳೆಯ ಅಂಕಗಳನ್ನು ಗಳಿಸಿರುವ ಹಲವು ಮಕ್ಕಳ ಸಾಧನೆಯನ್ನು ಗಮನಿಸಿದ್ದೇವೆ. ಈ ವಿದ್ಯಾರ್ಥಿಗಳ ಓದಿನ ಆಸಕ್ತಿ, ಛಲ ಬೇರೆಯವರಿಗೆ ಆದರ್ಶ. ಕಷ್ಟಪಟ್ಟರೆ ಫಲವುಂಟು ಎಂಬುದನ್ನು ಸಾಧಿಸಿ ತೋರಿಸಿದ ವಿದ್ಯಾರ್ಥಿಗಳೆಲ್ಲರಿಗೂ ನಮ್ಮ ಅಭಿನಂದನೆಗಳು. ಆ ಎಲ್ಲ ಮಕ್ಕಳ ಭವಿಷ್ಯ ಉತ್ತಮವಾಗಲಿ ಎಂಬ ಆಶಯ ನಮ್ಮದು.

ಜೂನ್ 6 ವಿಶೇಷ ದಿನ. ಖ್ಯಾತ ಶಿಕ್ಷಣ ತಜ್ಞರೂ, ಸರಳಜೀವಿಗಳೂ, ಗಾಂಧೀವಾದಿಗಳೂ ಆದ ಡಾ॥. ಹೆಚ್. ನರಸಿಂಹಯ್ಯನವರ ಜೀವನವೇ ಒಂದು ಆದರ್ಶ. ಅವರು ಜನಿಸಿದ್ದು ಜೂನ್ 6ರಂದು. ಈ ಸಂದರ್ಭದಲ್ಲಿ ಅವರ ಸಾಧನೆಗಳನ್ನು ಸ್ಮರಿಸಿ ಅವರಿಗೆ ನಮನವನ್ನು ಸಲ್ಲಿಸೋಣ. ಸಾಹಿತ್ಯದಲ್ಲಿ ಕಾವ್ಯ, ನಾಟಕ, ಕಾದಂಬರಿ, ಕಥೆ, ವಿಮರ್ಶೆ... ಹೀಗೆ ಅನೇಕ ಪ್ರಕಾರಗಳಿವೆ. ಅವುಗಳಲ್ಲಿ ಜನಪ್ರಿಯವಾದುದು ನಾಟಕ, ಕಥೆ. ಅದರಲ್ಲೂ ಕಥೆ ಎಲ್ಲ ವರ್ಗದ ಜನರಲ್ಲೂ ಬಾಯೂರಿಸುತ್ತದೆ. ಕನ್ನಡದಲ್ಲಿ ಸಣ್ಣಕತೆಗಳ ಜನಕ, ಪಿತಾಮಹ ಎಂದೇ ಖ್ಯಾತರಾದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರಚಿಸಿದ ಕಥೆಗಳು ಎಂಥವರನ್ನೂ ಸೆಳೆಯುತ್ತದೆ. ಶ್ರೀನಿವಾಸ ಕಾವ್ಯನಾಮದ ಮಾಸ್ತಿಯವರು ಕಾವ್ಯ, ನಾಟಕ, ವಿಮರ್ಶೆಗಳನ್ನೂ ರಚಿಸಿದ್ದಾರೆ. ಜ್ಞಾನಪೀಠ ಪುರಸ್ಕೃತರೂ ಕೂಡ. 95 ವರ್ಷಗಳ ತುಂಬು ಜೀವನ ನಡೆಸಿದ ಈ ಹಿರಿಯ ಚೇತನ ಜನಿಸಿದ್ದು, ಮರಣಿಸಿದ್ದು ಜೂನ್ 6 ರಂದು ಎಂಬುದು ಮತ್ತೊಂದು ವಿಶೇಷ. ಈ ವರ್ಷ ಮಾಸ್ತಿಯವರ 125ನೆಯ ಜನ್ಮೋತ್ಸವವನ್ನು ಆಚರಿಸಲಾಗಿದೆ. ಡಾ॥ ಮಾಸ್ತಿಯವರ ಸಾಹಿತ್ಯವನ್ನು ಓದುವುದರ ಮೂಲಕ ಅವರಿಗೆ ನಮ್ಮ ನಮನಗಳನ್ನು ಸಲ್ಲಿಸೋಣ.

ಆರೋಗ್ಯವೇ ಭಾಗ್ಯ. ಇದು ನಾಣ್ಣುಡಿ. ಕೇವಲ ನಾಣ್ಣುಡಿಯಷ್ಟೇ ಅಲ್ಲ, ನೂರಕ್ಕೆ ನೂರು ಸತ್ಯವೂ ಹೌದು. ಆದರೆ ಇಂದಿನ ದಿನಗಳಲ್ಲಿ ಆರೋಗ್ಯ ಭಾಗ್ಯ ಹೊಂದಿರುವವರು ವಿರಳವೆಂದರೆ ತಪ್ಪಲ್ಲ. ಆದರೂ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅನಿವಾರ್ಯ. ಅದಕ್ಕೆಂದೇ ಪತಂಜಲಿ ಮಹರ್ಷಿಗಳು ಜನರಿಗೆ ತೋರಿಸಿದ ದಾರಿ ಯೋಗ. ಪಾಶ್ಚಾತ್ಯರ ಪ್ರಭಾವ, ಅನುಕರಣೆಯಿಂದಾಗಿ ನಾವು ಯೋಗವನ್ನು ಮರೆತು ಆರೋಗ್ಯದ ಸಮಸ್ಯೆಗಳನ್ನು ಬರಮಾಡಿಕೊಳ್ಳುತ್ತಿದ್ದೇವೆ. ಈಗ ಮತ್ತೆ ಯೋಗದ ಮಹತ್ವ ಜನರಿಗೆ ಅರಿವಾಗುತ್ತಿದೆ. ಜೂನ್ 21 ಅಂತರ ರಾಷ್ಟ್ರೀಯ ಯೋಗ ದಿನ. ಶಿಕ್ಷಕರಾಗಿ ನಾವು ಅಂದು ಯೋಗವನ್ನು ಮಾಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ, ನೆರೆಯವರಿಗೆ ಯೋಗದ ಮಹತ್ವವನ್ನು ತಿಳಿಸಬಹುದಲ್ಲವೇ? ನಾವೂ ಆರೋಗ್ಯವಂತರಾಗೋಣ ; ಸಮಾಜವನ್ನೂ ಆರೋಗ್ಯವಾಗಿಡಲು ಸಹಕರಿಸೋಣ.

ಸಂಪಾದಕರು

## ಸೂಕ್ತಿ




ನೀನು ನಿಸ್ವಾರ್ಥಿಯೇ? ಎಂಬುದು ಪ್ರಶ್ನೆ. ನಿಸ್ವಾರ್ಥಿಯಾಗಿದ್ದರೆ ಯಾವ ಒಂದು ಧಾರ್ಮಿಕ ಗ್ರಂಥವನ್ನು ಓದದೆಯೂ, ದೇವಸ್ಥಾನ ಅಥವ ಚರ್ಚ್‌ಗೆ ಹೋಗದೆಯೂ ನೀನು ಪರಿಪೂರ್ಣನಾಗುತ್ತೀಯೆ.

- ಸ್ವಾಮಿ ವಿವೇಕಾನಂದ

## ಪರಿವಿಡಿ


- ಗುರು ಪೂರ್ಣಿಮೆ 3
- ಅಖಿಲ ಭಾರತೀಯ ಕಾರ್ಯಕರ್ತರ ಅಭ್ಯಾಸವರ್ಗ 5
- ಪರೀಕ್ಷೆ=ಅಂಕಗಳಿಕೆ=ಉದ್ಯೋಗ (ಹಣಗಳಿಕೆ) 6
- ಅಸಾಧಾರಣ ಸಾಹಸಿ ಜೆ.ಎನ್. ಟಾಟಾ 8
- ಉತ್ತರ ಜಿಲ್ಲೆಯ ಪದಾಧಿಕಾರಿಗಳ ಆಯ್ಕೆ 10
- ಅಭಿನಂದನೆಗಳು 10
- ಪದಬಂಧ 10
- ಹಳ್ಳಿ ಹೈದ, ಸಾಧನೆಯಿಂದ ವಿಶ್ವವಿದ್ಯಾಲಯದ ಕುಲಪತಿಯಾದ ಕಥೆ 11
- ಅರುಣ್ ಶಹಾಪುರ್–ಅಭಿನಂದನೆಗಳು 12



# ಗುರು ಪೂರ್ಣಿಮೆ

■ ನಂ ನಾಗಲಕ್ಷ್ಮಿ

ಗುರು ಎಂಬ ಪರಿಕಲ್ಪನೆ ಹಾಗೂ ಗುರು– ಶಿಷ್ಯ ಪರಂಪರೆ ಭಾರತೀಯ ಸಂಸ್ಕೃತಿಯ ವಿಶಿಷ್ಟವಾದ ವಿಷಯಗಳು. ಯಾವುದೇ ಕ್ಷೇತ್ರದಲ್ಲಿ ಒಂದು ನಿರ್ದಿಷ್ಟವಾಗಿದ ಉತ್ತಮ ಗುರಿಯನ್ನಿಟ್ಟು ಕೊಂಡು ಅದರಲ್ಲಿ ಸಫಲತೆಯನ್ನು ಹೊಂದಬೇಕಾದರೆ ಸೂಕ್ತ ಮಾರ್ಗದರ್ಶನ, ಸಾಧನೆ, ಪರಿಶ್ರಮ ಅಗತ್ಯ. ಅದು ಲೌಕಿಕವಾಗಿರಬಹುದು, ಅಧ್ಯಾತ್ಮವಾಗಿರಬಹುದು. ಒಬ್ಬ ಯೋಗ್ಯ ಗುರುವಿನ ಅಗತ್ಯ ಬೇಕೇಬೇಕು. ಅಂತೆಯೇ ನಮ್ಮ ಇತಿಹಾಸ, ಪುರಾಣಗಳಲ್ಲಿ, ಸಾಹಿತ್ಯ, ಸಂಗೀತ, ವೇದ, ವೇದಾಂತಗಳಲ್ಲಿ ಗುರುವಿಲ್ಲದೆ  ಶಿಷ್ಯರಿಲ್ಲ. ಶಿಷ್ಯರಿಲ್ಲದೆ ಗುರುವಿಲ್ಲ. ಶ್ರೀ ಶಂಕರಾಚಾರ್ಯರು 'ಗುರುವಿನ ಪಾದ ಪದ್ಮದಲ್ಲಿ ಮನಸ್ಸನ್ನು ಇಡದಿದ್ದರೆ ಏನನ್ನು ತಾನೇ ಸಾಧಿಸಲಾದೀತು? ಎಂದಿದ್ದಾರೆ. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮರು ಧರ್ಮರಾಯನಿಗೆ ಹೇಳುತ್ತಾರೆ "ಗುರುವು ತಂದೆ – ತಾಯಿಗಳಿಗಿಂತ ಶ್ರೇಷ್ಠರು" ಎಂದು. ಹರಿದಾಸರು ಹೇಳುತ್ತಾರೆ, "ಗುರುವಿನ ಗುಲಾಮನಾಗುವ ತನಕ, ದೊರೆಯದಣ್ಣ ಮುಕುತಿ" ಎಂದು.

ಗುರುದಾಸನು ಶಿಷ್ಯನ ಸಮಗ್ರ ವ್ಯಕ್ತಿತ್ವವನ್ನು ರೂಪಿಸುತ್ತಾನೆ, ಅದೂ ಒಂದು ಆರೋಗ್ಯಕರವಾದ ವ್ಯವಸ್ಥಿತವಾದ ರೀತಿಯಲ್ಲಿ. ಈ ಹಿನ್ನೆಲೆಯಲ್ಲಿ ಆಷಾಢಮಾಸದ ಹುಣ್ಣಿಮೆಯಂದು ಗುರುಗಳನ್ನು ಪೂಜಿಸುವ, ಗೌರವಿಸುವ, ಗುರುಪರಂಪರೆಯನ್ನು ವಂದಿಸುವ ಸಂಪ್ರದಾಯ ನಮ್ಮಲ್ಲಿದೆ. ಹುಣ್ಣಿಮೆಯ ಚಂದ್ರನಂತೆ ಸದ್ಗುರುವೂ ಕೂಡ ಜ್ಞಾನಪ್ರಕಾಶವನ್ನು ನೀಡುತ್ತಾನೆ ಎಂಬುದು ಇಲ್ಲಿನ ಒಂದು ಸಂದೇಶ. ಈ ಗುರುಪೂರ್ಣಿಮೆಯನ್ನು 'ವ್ಯಾಸ ಪೂರ್ಣಿಮೆ' ಯೆಂದೂ ಆಚರಿಸುತ್ತೇವೆ. ಬ್ರಹ್ಮವಿದ್ಯಾ ಸಂಪ್ರದಾಯದ ಗುರುಪರಂಪರೆಗೆ ನಾಂದಿ ಹಾಕಿ, ತಮ್ಮ ಜ್ಞಾನ ಪ್ರಕಾಶದಿಂದ ಲೋಕಗುರುವೆನಿಸಿದ ಮಹರ್ಷಿ ವೇದವ್ಯಾಸರು ಜನ್ಮತಳೆದ ದಿನವೇ ಇದು. ವ್ಯಾಸೋಚ್ಛಿಷ್ಟ ಜಗತ್‌ಸರ್ವಂ' ಜಗತ್ತಿನ ಜ್ಞಾನ–ವಿಜ್ಞಾನ ಪರಂಪರೆಯೆಲ್ಲವೂ ವ್ಯಾಸರು ತಿಂದು ಬಿಟ್ಟಿದ್ದು ಎಂಬ ಮಾತಿದೆ. ಅಂದರೆ ವ್ಯಾಸರು ವಿವರಿಸದೆ ಬಿಟ್ಟಿದ್ದು ಯಾವುದೂ ಇಲ್ಲ ಎಂದರ್ಥ. ಅದಕ್ಕೇ ಅವರು ಗುರುಗಳಿಗೆಲ್ಲ ಪರಮಗುರುಗಳು. ಮಹಾಭಾರತದಂತಹ ವಿಶಾಲ ಆಧ್ಯಾತ್ಮಿಕ, ಐತಿಹಾಸಿಕ ವಾಙ್ಮಯದ ಕರ್ತೃ. ಜ್ಞಾನರಾಶಿಯಾದ ವೇದವಾಙ್ಮಯವನ್ನು ಜನಸಾಮಾನ್ಯರ ಗ್ರಹಿಕೆಗೆ ಅನುವಾಗುವಂತೆ ಋಗ್, ಯಜುರ್, ಸಾಮ, ಅಥರ್ವಣಗಳೆಂದು ವಿಂಗಡಿಸಿದರು. ಅವರು ಅಷ್ಟಾದಶ ಪುರಾಣಗಳನ್ನು ರಚಿಸಿದವರು. ಅವರು 'ಹನುಮದ್ರಾಮಾಯಾಣ' ವೆಂಬ ಅಪೂರ್ವ, ಅದ್ಭುತ ಕೃತಿಯ ರಚನಕಾರರೂ ಅವರು. ಸ್ವತಃ ರಾಮದೂತ ಹನುಮಂತನು ಭೀಮಸೇನನಿಗೆ ಚತುರ್ಯುಗಗಳನ್ನು ಪರಿಚಯಿಸುತ್ತಾ ತಿಳಿಸುವುದರೊಂದಿಗೆ ರಾಜಧರ್ಮವನ್ನು ಬೋಧಿಸಿರುವ ಒಂದು ವಿಶಿಷ್ಟ ಕೃತಿ 'ಹನುಮದ್ರಾಮಾಯಣ'.

ನಮ್ಮ ಪುರಾಣದ ಕಥೆಗಳಲ್ಲಿ ಗುರು–ಶಿಷ್ಯರ ನಡುವಿನ ಆತ್ಮೀಯ ಹಾಗೂ ಪವಿತ್ರವಾದ ಸಂಬಂಧದ ಕುರಿತು ಅನೇಕ ದೃಷ್ಟಾಂತಗಳನ್ನು ಕಾಣುತ್ತೇವೆ. ಗುರುಕುಲದಲ್ಲಿ ಶಿಕ್ಷಣ ಪಡೆಯಲು ಹೋದ ವಿದ್ಯಾರ್ಥಿಗಳಲ್ಲಿ ಗುರು ಯಾವುದೇ ರೀತಿಯಲ್ಲಿಯೂ ತಾರತಮ್ಯ ತೋರುವುದಿಲ್ಲ. ಸಾಮಾನ್ಯರ ರಾಜ ಮಹಾರಾಜರ ಮಕ್ಕಳೆಲ್ಲರೂ ಸಮಾನರೇ– ಕೃಷ್ಣ– ಬಲರಾಮರು, ರಾಮ, ಲಕ್ಷ್ಮಣಾದಿಗಳು ಇತರ ವಿದ್ಯಾರ್ಥಿಗಳೊಂದಿಗೇ ಕಲಿತದ್ದು ಉಲ್ಲೇಖವಾಗಿದೆ. ಶಿಷ್ಯರನ್ನು ಪುತ್ರವಾತ್ಸಲ್ಯದಿಂದ ಕಾಣುತ್ತಿದ್ದ ಗುರು, ಗುರುವಿನಲ್ಲಿ ಪಿತೃವಿಗೆ ಸಮಾನವಾದ ಪೂಜ್ಯಭಾವನೆ ಹೊಂದಿದ್ದ ಶಿಷ್ಯ– ಎಂಬ ವಿವರಗಳ ಮೂಲಕ ಅವರಲ್ಲಿನ ಪರಸ್ಪರ ಸಂಬಂಧದ ಆಳವನ್ನು ತಿಳಿಯಬಹುದು. ಗುರುಕುಲ ದಿಂದ ಹೊರಡುವ ಶಿಷ್ಯನಿಗೆ ಗುರು ಉಪದೇಶಿಸುವುದು 'ಸತ್ಯಂವದ। ಧರ್ಮಂಚರ। ಸ್ವಾಧ್ಯಾಯಾನ್ನಪ್ರಮದಿತವ್ಯಮ್ ಅಂದರೆ, ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು, ಅಧ್ಯಯನ ಬಿಡಬೇಡ ಎಂದು.

ಶಿಷ್ಯನಿಗೆ ಕೇವಲ ಬೌದ್ಧಿಕ ಶಿಕ್ಷಣ ನೀಡುವುದಷ್ಟೇ ತನ್ನ ಕರ್ತವ್ಯವಲ್ಲ. ನೈತಿಕ ಶಿಕ್ಷಣ ಕೂಡ ನೀಡಿ ಅವನ ವ್ಯಕ್ತಿತ್ವದ ಪೂರ್ಣತೆಗೆ ಮಾರ್ಗದರ್ಶನ ನೀಡುತ್ತಿದ್ದುದು ಗುರುವಿನ ಧರ್ಮವಾಗಿತ್ತು. ಅಂತೆಯೇ ಗುರು ಸಾಕ್ಷಾತ್ ಭಗವಂತನ ಸ್ವರೂಪವೆನಿಸಿಕೊಳ್ಳುತ್ತಾನೆಂದು ಉಪನಿಷತ್ತುಗಳಲ್ಲಿ ಹೇಳಿದೆ. ಅವನು ಜ್ಞಾನದ ಭಂಡಾರವೇ ಆಗಿರುತ್ತಾನೆ. ಹಾಗೆಯೇ ಶಿಷ್ಯನಿಗೆ ಇರಬೇಕಾದ ಯೋಗ್ಯತೆಯ ಕುರಿತು ಕೂಡ ಉಪನಿಷತ್ತುಗಳಲ್ಲಿ ತಿಳಿಸಲಾಗಿದೆ. ಗುರು–ಶಿಷ್ಯರಿಬ್ಬರೂ ಪರಸ್ಪರರನ್ನು ಪರೀಕ್ಷೆ ಮಾಡಿ ಒಪ್ಪಿಕೊಳ್ಳುತ್ತಾರಂತೆ. ಅದೇ ಯೋಗ್ಯ ಗುರು ಮತ್ತು ಯೋಗ್ಯ ಶಿಷ್ಯನ ಲಕ್ಷಣವಂತೆ. ಸ್ವಾಮಿ ವಿವೇಕಾನಂದರಾಗುವ ಮೊದಲು

ಪುಟ 9 ಕ್ಕೆ ➤

# ಅಖಿಲ ಭಾರತೀಯ ಕಾರ್ಯಕರ್ತರ ಅಭ್ಯಾಸವರ್ಗ

## ದಿನಾಂಕ: 22ರಿಂದ 24 ಮೇ 2016ರವರೆಗೆ ಮೈಸೂರಿನ ಪ್ರಮತಿ ವಸತಿಯುತ ಶಾಲೆಯಲ್ಲಿ ನಡೆದ ಕಾರ್ಯಕ್ರಮದ ವರದಿ:

ದಿನಾಂಕ 22.5.2016 ರ ಸಂಜೆ ಉದ್ಘಾಟನಾ ಸಮಾರಂಭವು ABRSM ರಾಷ್ಟ್ರೀಯ ಅಧ್ಯಕ್ಷರಾದ ಶ್ರೀಯುತ ವಿಮಲ್ ಪ್ರಸಾದ್ ಅಗರ್‌ವಾಲ್ ಅವರ ಅಧ್ಯಕ್ಷತೆಯಲ್ಲಿ ಸರಸ್ವತಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ದೀಪ ಬೆಳಗುವುದರೊಂದಿಗೆ ಆರಂಭ ವಾಯಿತು.

ವೇದಿಕೆಯ ಮೇಲೆ ABRSM ಪ್ರಧಾನ ಕಾರ್ಯದರ್ಶಿಗಳಾದ ಜೆ.ಪಿ. ಸಿಂಘಲ್‌ರವರು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಗಳಾದ ಶ್ರೀಯುತ ಮಹೇಂದ್ರಕಪೂರ್‌ರವರು ಮತ್ತು ಪ್ರಶಿಕ್ಷಣ ಪ್ರಕೋಷ್ಠಕದ ಪ್ರಮುಖರಾದ ಹೆಚ್. ನಾಗಭೂಷಣರವರು ಉಪಸ್ಥಿತರಿದ್ದರು.

ಶ್ರೀಯುತ ನಾಗಭೂಷಣರವರು "ಎರಡು ವರ್ಷಗಳಿಗೊಮ್ಮೆ ಕಾರ್ಯಕರ್ತರ ಅಭ್ಯಾಸವರ್ಗ ನಡೆಸುವ ಉದ್ದೇಶವನ್ನು ತಿಳಿಸುತ್ತಾ... ವಾಲ್ಮೀಕಿ ಋಷಿಗಳು ಮೊದಲು ಕಾಡಿನಲ್ಲಿ ದರೋಡೆಕೋರನಾಗಿದ್ದು ನಾರದ ಮುನಿಗಳ ಮುಖಾಂತರ 'ರಾಮನ' ಮಂತ್ರದ ಉಪದೇಶವನ್ನು ಪಡೆದು ಸತತ ಪುನರ್ ಉಚ್ಚಾರಣೆಯೊಂದಿಗೆ ಮಹಾಋಷಿಯಾದನು. ಶ್ರೀರಾಮನ ದರ್ಶನ ಭಾಗ್ಯವೂ ಪಡೆದುಕೊಂಡ ಆದಿ ಕವಿ ಎಂದು ಪ್ರಸಿದ್ಧರಾದರು. 'ಧ್ರುವ' ಶ್ರೀ ನಾರಾಯಣ ಮಂತ್ರವನ್ನು ಸತತವಾಗಿ ಜಪಿಸಿ ನಕ್ಷತ್ರ ರೂಪವನ್ನು ಪಡೆದುಕೊಂಡನು. ಇದೇರೀತಿ ನಾವುಗಳೂ ಸಹ ಒಂದೇ ಮುಖ್ಯ ವಿಷಯವನ್ನು ಪುನಃ ಪುನಃ ಕೇಳುತ್ತಾ ಕೇಳುತ್ತಾ ಸಾಧಕರಾಗಲು ಸಾಧ್ಯವಿದೆ. ಆದ್ದರಿಂದ ಈ ಅಭ್ಯಾಸವರ್ಗದಲ್ಲಿ ಪೂರ್ಣಮನಸ್ಸಿನಿಂದ ಪಾಲ್ಗೊಳ್ಳೋಣ" ಎಂದರು. ABRSM ಪ್ರಧಾನ ಕಾರ್ಯದರ್ಶಿಗಳಾದ ಜೆ.ಪಿ ಸಿಂಘಲ್‌ರವರು "ಯಾವುದೇ ವಿಚಾರವನ್ನು ಕೇವಲ ಆಲಿಸುವುದರಿಂದ ಯಾವುದೇ ಲಾಭವಾಗುವುದಿಲ್ಲ. ವಿಷಯವನ್ನು ಅರ್ಥೈಸಿಕೊಂಡು ಕಾರ್ಯಾನ್ವಿತಗೊಳಿಸಿದಾಗ ಮಾತ್ರ ಭಾಗವಹಿಸಿದ್ದು ಸಾರ್ಥಕವಾಗುತ್ತದೆ. ಅನೇಕ ಬಾರಿ ಅಭ್ಯಾಸ ವರ್ಗದಲ್ಲಿ ಪುನಃ ಭಾಗವಹಿಸುವುದೇಕೆ ಎಂದು ಸಹಜವಾಗಿ ಮನಸ್ಸಿನಲ್ಲಿ ಸಂಶಯ ಮೂಡಿರಬಹುದು. ಆದರೆ ಒಂದೇ ವಿಚಾರವನ್ನು ಪುನಃ ಪುನಃ ಅಭ್ಯಾಸ ಮಾಡುವುದರಿಂದ ಅದನ್ನು ಜೀವನದಲ್ಲಿ ಸಮನ್ವಯಗೊಳಿಸಿಕೊಂಡು ಪ್ರಕ್ರಿಯೆಯಲ್ಲಿ ಒಳಗೊಳ್ಳುತ್ತೇವೆ. ಆಲಿಸುವ ಅಭ್ಯಾಸ ಮಾಡಿಸಿಕೊಂಡು ಸಕ್ರಿಯ ಶ್ರೋತೃಗಳಾಗಬೇಕು. ರೂಪರೇಷೆಗಳನ್ನು ಅರ್ಥೈಸಿಕೊಂಡು ಮಥಿಸಿ ಸಮಯದ ಸದುಪಯೋಗ ಮಾಡಿಕೊಳ್ಳೋಣ".

ABRSM ಅಧ್ಯಕ್ಷರಾದಂತಹ ಶ್ರೀಯುತ ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ಕಾರ್ಯಕರ್ತರ ಬೆಳವಣಿಗೆಗಾಗಿ ಅನೇಕ ಕಾರ್ಯಗಳನ್ನು ಅಳವಡಿಸಿಕೊಡುವುದರ ಬಗ್ಗೆ ತಿಳಿಸಿದರು. ದ್ವಿಪಕ್ಷೀಯ ಮಾತುಕತೆಯಿಂದ ವಿಷಯ ಸ್ಪಷ್ಟಗೊಳ್ಳುತ್ತವೆ. ಚರ್ಚೆಯ ಮಾಧ್ಯಮವನ್ನು ನಮ್ಮದಾಗಿಸಿಕೊಂಡು ವಿಷಯವನ್ನು ಮುಂದುವರಿಸಬೇಕು. ಸಂಘಟನೆಯ ಬೈಠಕ್‌ಗಳನ್ನು ಆಯೋಜಿಸವುದು ವಿವಿಧ ಹಂತದ ಪ್ರವಾಸ, ಸದಸ್ಯತ್ವ ಅಭಿಯಾನ, ವಿಷಯಾಧಾರಿತ ತರಬೇತಿ, ಕಾರ್ಯಕರ್ತರ ಅಭ್ಯಾಸವರ್ಗ ಇವು ಅತ್ಯಂತ ಪ್ರಮುಖವಾದವುಗಳು.

ಉಪವಾಸ ಸತ್ಯಾಗ್ರಹ, ಸಾಮೂಹಿಕ ರಜೆಹಾಕುವುದು, ಕಪ್ಪುಬಟ್ಟೆಯನ್ನು ಧರಿಸಿ ಕರ್ತವ್ಯ ನಿರ್ವಹಿಸುವುದು, ಜ್ಞಾಪನಾಪತ್ರ, ನೀಡುವುದು, ಕಾರ್ಯಕರ್ತನಿಗೆ ತಿಳಿಹೇಳುವುದು, ಅಧಿಕಾರಿಗಳೊಂದಿಗೆ ಚರ್ಚೆ, ಪತ್ರಚಳುವಳಿ ಮುಂತಾದವುಗಳನ್ನು ನಡೆಸಿಕೊಂಡು ಆಂದೋಲನ ನಡೆಸುವುದು.

ಕೇವಲ ನಮ್ಮ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರವಲ್ಲದೆ ಸಾಮಾಜಿಕ ವಿಷಯಗಳನ್ನು ಜೋಡಿಸಿಕೊಂಡು ವಿಶೇಷ ವಿಷಯಗಳ ಬಗ್ಗೆ ಚರ್ಚಿಸಿ ಸಾಮೂಹಿಕ ನಿರ್ಣಯಗಳನ್ನು ತೆಗೆದುಕೊಳ್ಳುವುದು. ಇದರಿಂದಾಗಿ ವಿವಿಧ ವಿಷಯಗಳ ಬಗ್ಗೆ ಜ್ಞಾನಾಭಿವೃದ್ಧಿಯಾಗುವುದು.

ನಮ್ಮ ಆಂದೋಲನ ಹೇಗಿರಬೇಕೆಂದರೆ ಅತೀ ದೊಡ್ಡ ಸಂಖ್ಯೆಯಲ್ಲಿ ಸಂಘಟಿಸಬೇಕು. ಆದ್ದರಿಂದ ನಮ್ಮ ಆತ್ಮವಿಶ್ವಾಸ ವೃದ್ಧಿಸುವಂತಿರಬೇಕು. ನಮ್ಮ ಆಂದೋಲನವು ಪರೀಕ್ಷಾ ಸಮಯದಲ್ಲಿ ಸಂಘಟಿಸಬಾರದು. ವರ್ಷಕ್ಕೊಂದು ಬಾರಿ ಅಧಿವೇಶನ ಮತ್ತೊಂದು ಬಾರಿ ಅಭ್ಯಾಸವರ್ಗ. ಅಭ್ಯಾಸವರ್ಗದ ಉದ್ದೇಶ ಕಾರ್ಯಕರ್ತರ ಜ್ಞಾನಾಭಿವೃದ್ಧಿ ತನ್ಮೂಲಕ ಕಾರ್ಯ ವಿಸ್ತಾರ, ನೂತನ ಕಾರ್ಯಕರ್ತರ ನಿರ್ಮಾಣ ಸಂಖ್ಯೆ ಸೀಮಿತವಾಗಿರುತ್ತದೆ. ಅಭ್ಯಾಸ ವರ್ಗಗಳಲ್ಲಿ ಉತ್ತಮ ಫಲಿತಾಂಶ ಹೊರಬರಲು ಸಾಧ್ಯವಿರುತ್ತದೆ.

ಕೇವಲ ಅಭ್ಯಾಸ ವರ್ಗಗಳಲ್ಲಿ ಭಾಗವಹಿಸಿದಾಕ್ಷಣ ಯಾರೂ ಇತರರಿಗಿಂತ ದೊಡ್ಡವರಲ್ಲ. ಸಂಘಟನೆ ಯಾವುದೇ ನಿರ್ಭರವಾಗಿರುವುದಿಲ್ಲ. ವಿಷಯ ಮಂಥನವಾಗುತ್ತಿರಬೇಕು. ನಿರಂತರ ಅಭ್ಯಾಸದಿಂದ ಮಂದಮತಿಯು ಜ್ಞಾನವಂತ ನಾಗುತ್ತಾನೆ. ತಾಮ್ರದ ಪಾತ್ರೆಯು ದಿನವೂ ಉಜ್ಜುವುದರಿಂದ ಮಾತ್ರ ಹೊಳೆಯುತ್ತದೆ. ಬಿಟ್ಟಲ್ಲಿ ಕೆಲವೇ ದಿನಗಳಲ್ಲಿ ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ. ಆದರೆ ಕೇವಲ ಹೊರಗಿನಿಂದ ಮಾತ್ರವಲ್ಲದೆ ಒಳಗಿನಿಂದಲೂ ಸಹ ಸ್ವಚ್ಛಗೊಳಿಸುವುದು ಅವಶ್ಯವಿದೆ.

ಬೋರ್ಡಿನ ಮೇಲೆ ಒಂದು ರೇಖೆಯನ್ನು ಬರೆದು ಅದನ್ನು

ಪುಟ 5 ಕ್ಕೆ ➤

➢ ಪುಟ 4 ರಿಂದ..... ಅಭ್ಯಾಸವರ್ಗ ...

ಆಲಿಸದೇ ಸಣ್ಣದಾಗಿ ಮಾಡಬೇಕೆಂದರೆ ಅದಕ್ಕಿಂತ ಉದ್ದವಾದ ರೇಖೆಯನ್ನು ರಚಿಸುವುದೊಂದೆ ಮಾರ್ಗ. ಅದರಂತೆ ಕಾರ್ಯಕರ್ತರು ಎಲ್ಲಾ ಅಡೆತಡೆಗಳನ್ನು ಮೀರಿ ಮುಂದುವರೆಯಬೇಕು.

ನಾನು ಸಂಘಟನೆಯ ಕಾರ್ಯಮಾಡುತ್ತೇನೆಂದಾದರೆ ಸಂಘಟನೆಯ ಆಧಾರವೂ ಹೌದು. ವಿಕಾಸವನ್ನು ನನ್ನದಾಗಿಸಿ ಕೊಳ್ಳಬೇಕು. ಸುಧಾರಣೆ ಸಾಧ್ಯವಿಲ್ಲವೆಂದು ಯೋಚಿಸಿದರೆ ನಾವು ಜಡವಾಗುತ್ತೇವೆ. ಬದಲಾವಣೆಯಿಂದಾಗಿ ವಿಕಾಸ ಸಾಧ್ಯ ವಾಗುತ್ತದೆ. ಹೂವು ಹಣ್ಣುಗಳಿಂದ ಗಿಡಮರಗಳು ಶೋಭಿಸುತ್ತದೆ. ಕಾರ್ಯಕರ್ತರೊಂದಿಗೆ ಸಜೀವ ಸಂಪರ್ಕ ಸಾಧ್ಯವಾಗಿಸಿ ಕೊಳ್ಳಬೇಕು. ಕಾರ್ಯಕರ್ತರನ್ನು ಅವರ ಹೆಸರಿನೊಂದಿಗೆ ಸಂಬೋಧಿಸಿದಾಗ ಹೆಚ್ಚು ಪ್ರಭಾವಶಾಲಿಯಾಗುತ್ತೇವೆ. ಕಾರ್ಯಕರ್ತರ ಮನೆಗಳಿಗೆ ಭೇಟಿನೀಡಿ ಪರಿವಾರದೊಂದಿಗೆ ಸಂಪರ್ಕವಿಟ್ಟುಕೊಳ್ಳುವುದರಿಂದ ಮನೆ– ಮನಗಳ ಸಂಪರ್ಕ ಸಾಧ್ಯವಾಗುತ್ತದೆ. ಪ್ರತ್ಯಕ್ಷ ಸಂಪರ್ಕವೆ ಉತ್ತಮ ಮಾರ್ಗವಾಗಿದೆ. ಪ್ರತಿಯೊಬ್ಬ ಕಾರ್ಯಕರ್ತರ ವಿಳಾಸ, ದೂರವಾಣಿಯ ಸಂಖ್ಯೆ, ಇ–ಮೇಲ್ ಐಡಿ ಮುಂತಾದವುಗಳನ್ನು ಸಂಗ್ರಹಿಸಿಕೊಳ್ಳಬೇಕು. ನಾವು ಉತ್ತಮಗೊಂಡಾಗ ಜಗತ್ತು ಉತ್ತಮಗೊಳ್ಳುತ್ತದೆ ಎಂದು ಧ್ಯೇಯ ವಾಕ್ಯದೊಂದಿಗೆ ನಾವು ಕಾರ್ಯ ಪ್ರವೃತ್ತರಾಗಬೇಕು.

* * *

ಶ್ರೀ ಹರಿಬಾವು ವಜೆ ಇವರು ಇತಿಹಾಸ ಸಂಕಲನದ ಸಂಚಾಲಕರಾಗಿದ್ದಾರೆ. ಶ್ರೀಯುತರು ತಮ್ಮ ವಿಚಾರಗಳನ್ನು ಕಾರ್ಯಕರ್ತರೊಂದಿಗೆ ಹಂಚಿಕೊಳ್ಳುತ್ತಾ "ನಾನು ತಮಗೆ ಮಾರ್ಗದರ್ಶನ ಮಾಡಲು ಬಂದಿಲ್ಲಾ, ಬದಲಾಗಿ ತಮ್ಮ ದರ್ಶನ ಪಡೆಯಲು ಬಂದಿದ್ದೇನೆ. ಕಾರಣ ಶಿಕ್ಷಕರು ಸಮಾಜದಲ್ಲಿ ಸದಾಕಾಲ ಉನ್ನತ ಸ್ಥಾನವನ್ನು ಪಡೆದಿರುವಂತವರು. ನಾನೆಂದೂ ಶಿಕ್ಷಕನಾಗಲಿಲ್ಲ. ಮಹಾಪುರುಷರು ಜೀವನದಲ್ಲಿ ಹೇಳಿದ್ದನ್ನು ಆಚರಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ಅಂತಹ ಮಹಾಪುರುಷರ ವಿಚಾರಗಳನ್ನು ತಿಳಿಸುವುದು ಅವಶ್ಯಕವಾಗಿದೆ. ಶ್ರೀ ಚಿನ್ಮಯಾನಂದರ ವಿಚಾರ ಹೀಗಿತ್ತು ಎಂದು ನಿಷ್ಕರ್ಷೆಯನ್ನು ವಿದ್ಯಾರ್ಥಿಗಳೆದುರಿಗೆ ಇಡಬಾರದು ಅವರ ಹೃದಯಕ್ಕೆ ನಾಟುವಂತ ರೀತಿಯಲ್ಲಿ ವಿಚಾರಗಳನ್ನು ತಿಳಿಸಬೇಕು. ತಮ್ಮ ನಡವಳಿಕೆಗಳೆ ಉದಾಹರಣೆಯಂತಿರಬೇಕು. ಒಂದು ಬಾರಿ ಒಬ್ಬ ತಾಯಿ ಒಂದು ಮಗುವನ್ನು ಬಿಸಿಲಿನಲ್ಲಿ ಕರೆದುಕೊಂಡು ಹೊರಟಿದ್ದಳು. ಮಗು ಕಾಲು ಸುಡುತ್ತಿದ್ದರಿಂದ ಎತ್ತಿಕೊಳ್ಳುವಂತೆ ಹಠಮಾಡುತ್ತಿತ್ತು. ಆದರೆ ತಾಯಿ ನಾನು ದೇವಸ್ಥಾನಕ್ಕೆ ಹೋಗುತ್ತಿದ್ದೇನೆ. ಬೇಕಾದರೆ ಬಾ ಎಂದಾಗ ಮಗು ತಟ್ಟನೆ ಹಿಂಬಾಲಿಸಿತು. ಈ ರೀತಿ ಉತ್ತಮವಾದ ಪ್ರೇರಣೆಯನ್ನು ನೀಡುವಂತಹ ಕೆಲಸವನ್ನು ಶಿಕ್ಷಕರು ಮಾಡಬೇಕಾಗಿದೆ".

ಪಂಡಿತ್ ಮದನ್ ಮೋಹನ ಮಾಲವಿಯರು ಅಂಬೇಡ್ಕರ್‌ರವರ ವಿದ್ಯಾರ್ಥಿ ದೆಸೆಯಲ್ಲಿ ಅವರ ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ಅಂಬೇಡ್ಕರ್‌ರವರ ಕಾರ್ಯಕಲಾಪವನ್ನು ಗಮನಿಸಿ ಅವರನ್ನು ಉದ್ದೇಶಿಸಿ ನಿನ್ನ ಶಿಕ್ಷಣ ಪೂರ್ಣವಾದ ನಂತರ ನಮ್ಮ ವಿದ್ಯಾಸಂಸ್ಥೆಗೆ ಬಾ ಎಂದು ಆಹ್ವಾನಿಸಿದರು. ಆದರೆ ಅಂಬೇಡ್ಕರ್‌ರವರು ಬಂದ ತಕ್ಷಣ ಅಡಿಗೆಯವರು ಅಡುಗೆ ಮಾಡುವುದನ್ನು ನಿಲ್ಲಿಸಿದರು. ಆಗ ಮದನ್ ಮೋಹನ್ ಮಾಳವೀಯವರು ತಮ್ಮ ಮನೆಯಿಂದ ಊಟ ತರಹತ್ತಿದರು. ಅಂಬೇಡ್ಕರ್‌ರವರು ತಮ್ಮನ್ನ ತಾವೇ ಶಿಕ್ಷಕರೆಂದು ತಿಳಿದುಕೊಳ್ಳಲಿಲ್ಲ. ತಮ್ಮನ್ನು ತಾವೂ ಸದಾ ಕಾಲ ವಿದ್ಯಾರ್ಥಿಯೇ ಎಂದು ತಿಳಿದುಕೊಳ್ಳುತ್ತಿದ್ದರು. ಇಂತವರ ಜೀವನ ಅನುಸರಿಸಲು ಯೋಗ್ಯವಾಗಿದೆ.

ಬಾಬಾ ಅಮ್ಟೆಯವರು ಯಾದವ್ ರಾವ್‌ಜಿಯವರ ಸಹಪಾಠಿಯಾಗಿದ್ದರು. ಅಮ್ಟೆಯವರು ಯಾದವರಾವ್‌ರವರಿಗೆ ತಮ್ಮಲ್ಲಿ ಯುವಕರನ್ನು ಕಾಣುತ್ತಿದ್ದೇನೆ ಎನ್ನುತ್ತಿದ್ದರು. ಯುವಕರೆಂದರೇ ಭವ್ಯವಾದ ಕನಸುಗಳನ್ನು ಕಾಣಬಹುದು ಮತ್ತು ಎಷ್ಟೇ ಅಡೆತಡೆಗಳು ಬಂದರೂ ಸಹ ಹೊಂದುಕೊಳ್ಳುವ ಚಲವುಳ್ಳವರು. ಆಚಾರ್ಯರೆಂದರೆ ಒಂದು ವಿಷಯಗಳಲ್ಲಿ ಪರಿಣಿತ ಸಾಧಿಸುವುದು ದೊಡ್ಡದೇನಲ್ಲ. ಭಾರಿ ಪಾರಮಾರ್ಥಿಕ ವಿಚಾರಗಳಲ್ಲಿಯೂ ಸಹ ಪರಿಣಿತಿ ಹೊಂದಿರುವುವರನ್ನು ಋಷಿಗಳು ಎಂದು ಕರೆಯಲಾಗುತ್ತದೆ. ನಮ್ಮ ಜೀವನ ಪರಿಶುದ್ಧವಾಗಿರಬೇಕು. ನಮ್ರತೆಯನ್ನು ಒಳಗೊಂಡಿರಬೇಕು. ಯೋಚಿಸಿ ಅರ್ಥೈಸಿಕೊಂಡು ಮಾತನಾಡಬೇಕು. ಯಾವ ಭೂಪ್ರದೇಶದಲ್ಲಿ ವಾಸಿಸುವ ನಾಗರಿಕರು ಆ ದೇಶದ ರಕ್ಷಣೆಗಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಲು ತಯಾರಿರುತ್ತಾರೋ ಅದನ್ನು ರಾಷ್ಟ್ರ ಎಂದು ಕರೆಯುತ್ತಾರೆ.

ಪ್ರಪಂಚದಲ್ಲಿ ಕೇವಲ ಎರಡು ರಾಷ್ಟ್ರಗಳು ಮಾತ್ರ ಕಳೆದ ನಾಲ್ಕು ಸಾವಿರ ವರ್ಷಗಳಿಂದ ತಮ್ಮ ಪರಂಪರೆಯನ್ನು ಕಾಪಾಡಿಕೊಂಡು ಬರಲು ಶಕ್ತವಾಗಿದ್ದವು. ಆದರೆ ಈಗ ಭಾರತ ಮಾತ್ರ ತನ್ನ ರಾಷ್ಟ್ರೀಯ ಪರಂಪರೆಯನ್ನು ಕಾಯ್ದುಕೊಂಡು ಬರುತ್ತಿದೆ. ಈ ರೀತಿಯ ಉದಾಹರಣೆಗಳೊಂದಿಗೆ ಪ್ರೇರಣೆ ನೀಡಬೇಕಾದುದ್ದು ನಮ್ಮ ಕರ್ತವ್ಯವಾಗಿದೆ. ಯಾರು ತಮ್ಮ ಇತಿಹಾಸವನ್ನು ಮರೆಯುತ್ತಾರೋ ಅವರಿಗೆ ಭವಿಷ್ಯವಿಲ್ಲ. ಇತಿಹಾಸದಿಂದಲೇ ಜೀವನ ನಿರ್ಮಾಣ ಸಾಧ್ಯವಾಗಿದೆ.

**ವರದಿ: ಶ್ರೀ ಎಸ್. ಕೃಷ್ಣಮೂರ್ತಿ ಶ್ರೇಷ್ಠಿ**


**ಪ್ರತಿ ಕಾರ್ಯದ ಯಶಸ್ಸು ನಮ್ಮ ಶ್ರಮ ಮತ್ತು ಬದ್ಧತೆಯನ್ನು ಅವಲಂಬಿಸಿರುತ್ತದೆ. ಅವೆರಡನ್ನೂ ಮೈಗೂಡಿಸಿಕೊಂಡು ಮುನ್ನಡೆದರೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ.**

# ಪರೀಕ್ಷೆ=ಅಂಕಗಳಿಕೆ=ಉದ್ಯೋಗ (ಹಣಗಳಿಕೆ)

ಎಸ್ ಎಸ್ ಎಲ್ ಸಿ & ಪಿ ಯು ಸಿ ಪರೀಕ್ಷಾ ಫಲಿತಾಂಶಗಳು ಪ್ರಕಟವಾಗಿವೆ. ಈ ಫಲಿತಾಂಶಗಳ ಬಗ್ಗೆ ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಲ್ಲ. ಆದರೆ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಗಳು ಹೇಗೆ ವಿದ್ಯಾರ್ಥಿಗಳ ಪಾಲಿಗೆ ಒಂದು ಟರ್ನಿಂಗ್ ಪಾಇಂಟ್ ಆಗುತ್ತದೆ, ತಂದೆ– ತಾಯಂದಿರು ಈ ಟರ್ನಿಂಗ್ ಪಾಇಂಟ್‌ಗಾಗಿ ತಮ್ಮ ಮಕ್ಕಳಿಗೆ ಅದೇನೆಲ್ಲಾ ಕಿರಿ ಕಿರಿ ಮಾಡುತ್ತಾರೆ, ಮಕ್ಕಳ ಸಹಜ ಸ್ವಭಾವಕ್ಕೆ ಹೇಗೆ ಕುತ್ತು ತರುತ್ತಾರೆ ಇತ್ಯಾದಿ ಸಂಗತಿಗಳ ಬಗೆಗಿನ ಒಳನೋಟ ಹರಿಸುವುದೇ ಇಲ್ಲಿನ ಮುಖ್ಯ ಉದ್ದೇಶ.

ಎಸ್ ಎಸ್ ಎಲ್ ಸಿ, ಪಿ ಯು ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ ಬಳಿಕ ಹಲವರು ಫಲಿತಾಂಶ ನೋಡಿ ಸಂಭ್ರಮ ಪಟ್ಟಿದ್ದರೆ, ಕೆಲವರಿಗೆ ನಿರಾಶೆಯಾಗಿದೆ. ಪರೀಕ್ಷೆಯಲ್ಲಿ ನಪಾಸ್ ಆಗಿದ್ದಕ್ಕೆ ಕೆಲವರು ಆತ್ಮಹತ್ಯೆ ಮಾಡಿಕೊಂಡ ಘಟನೆಗಳು ನಡೆದಿವೆ. ಈ ಕಾಲದಲ್ಲೂ ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವವರು ಇರುತ್ತಾರಾ ಎಂಬುದೇ ಆಶ್ಚರ್ಯದ ಸಂಗತಿ. ಎಳೆಯ ಮನಸ್ಸು ವಿವೇಕ ಮೂಡದ ಚಿಕ್ಕ ವಯಸ್ಸು. ಹೀಗಿರುವಾಗ ಆತ್ಮಹತ್ಯೆಯೇ ಪರಿಹಾರವೆಂದು ಅಂತಹ ನತದೃಷ್ಟರಿಗೆ ಅನಿಸುವುದು ಸ್ವಾಭಾವಿಕ. ಇಂತಹ ಸಂದರ್ಭದಲ್ಲಿ ಪೋಷಕರು, ಶಿಕ್ಷಕರು ಅಂತಹ ವಿದ್ಯಾರ್ಥಿಗಳ ಜೊತೆ ಆಪ್ತ ಸಮಾಲೋಚನೆ ನಡೆಸಿ ಅವರಿಗೆ ಒಂದಿಷ್ಟು ಬುದ್ಧಿ ಮಾತು ಹೇಳಿದರೂ ಆತ್ಮಹತ್ಯೆ ಪ್ರಕರಣಗಳನ್ನು ಖಂಡಿತ ತಪ್ಪಿಸಬಹುದು. ಅಷ್ಟಕ್ಕೂ ಪರೀಕ್ಷೆಯಲ್ಲಿ ಫೇಲ್ ಆದರೆ ಮುಂದೆ ಯಾವುದೇ ಭವಿಷ್ಯ ಇಲ್ಲವೇ ಇಲ್ಲವೆಂದಲ್ಲ. ಫೇಲ್ ಆದರೆ ಮತ್ತೊಮ್ಮೆ ಪರೀಕ್ಷೆ ಕಟ್ಟಿ ಪಾಸ್ ಆಗಲು ಅವಕಾಶವಿದೆ. ಸಾರ್ವಜನಿಕ ರಂಗದಲ್ಲಿ ಜನಪ್ರಿಯರಾಗಿರುವ ಅದೆಷ್ಟೋ ಮಂದಿ ಪರೀಕ್ಷೆಯಲ್ಲಿ ಫೇಲಾದವರೇ. ಫೇಲ್ ಆದರೆಂದು ಅವರು ಕೊರಗುತ್ತಾ ಕುಳಿತಿದ್ದರೆ ಅವರೆಲ್ಲ ಇಂದು ಸೆಲಿಬ್ರಿಟಿಗಳಾಗಲು ಸಾಧ್ಯವಿರಲಿಲ್ಲ.

ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು, ಅನಂತರ ಉನ್ನತ ವ್ಯಾಸಂಗಕ್ಕೆ ಪ್ರವೇಶ ಕೋರಿ, ಆ ಬಳಿಕ ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಪದವಿ ಪಡೆದು, ಉದ್ಯೋಗ ಹಿಡಿದು ಎಲ್ಲಾದರೂ ಒಂದು ಕಡೆ ಶಾಶ್ವತವಾಗಿ ಸೆಟಲ್ ಆಗಿ ಬಿಟ್ಟರೆ ಅಲ್ಲಿಗೆ ಬದುಕಿನ ಉದ್ದೇಶ ಸಾರ್ಥಕವಾಯಿತೆಂದು ಬಗೆಯುವ ಮಂದಿಯೇ ಹೆಚ್ಚು. ವಾಸ್ತವವಾಗಿ ಶಿಕ್ಷಣದ ಉದ್ದೇಶ ಖಂಡಿತ ಇದಲ್ಲ. ಶಿಕ್ಷಣದ ಮೂಲಕ ಜ್ಞಾನ ಪಡೆದು ಅದರಿಂದ ವ್ಯಕ್ತಿತ್ವವನ್ನು ವಿಕಾಸಗೊಳಿಸುವುದು, ಸಮಾಜಕ್ಕೆ ಉಪಯೋಗಿಯಾಗಿ ಬದುಕುವುದು, ತನ್ನಂತೆಯೇ ಉಳಿದವರು ಶಿಕ್ಷಣ ಪಡೆಯುವಂತೆ ಆಗಬೇಕೆಂದು ಬಯಸುವುದು.... ಇವೇ ಶಿಕ್ಷಣದ ಮೂಲ ಉದ್ದೇಶ. ಆದರೆ ನಾವಿಂದು ಶಿಕ್ಷಣದ ಮೂಲ ಉದ್ದೇಶವನ್ನೇ ಮರೆತು, ಉದ್ಯೋಗ ಹಿಡಿಯುವುದಕ್ಕಾಗಿಯೇ ಶಿಕ್ಷಣವಿರುವುದು ಎಂಬ ಸೀಮಿತ ಚೌಕಟ್ಟನ್ನು ಹಾಕಿಕೊಂಡಿದ್ದೇವೆ. ಇದೊಂದು ಅಪಾಯಕಾರಿ ಬೆಳವಣಿಗೆ.



ಈ ಬಾರಿ ಎಸ್.ಎಸ್.ಎಲ್.ಸಿ, ಪಿಯುಸಿ ಪರೀಕ್ಷಾ ಫಲಿತಾಂಶಗಳು ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಾಕಷ್ಟು ಗಮನಾರ್ಹ ಸಂದೇಶಗಳನ್ನು ರವಾನಿಸಿವೆ. ಹೆಚ್ಚಿನ ಅಂಕಗಳಿಗೆ ಪ್ರತಿಷ್ಠಿತ ಶಾಲೆಗಳು, ದುಬಾರಿ ವೆಚ್ಚದ ಟ್ಯೂಷನ್ ಅಗತ್ಯವಿಲ್ಲ, ಸಾಧಾರಣ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದರೂ ಹೆಚ್ಚಿನ ಅಂಕ ಪಡೆಯಬಹುದು. ತೀರಾ ಬಡತನದ ಕುಟುಂಬದಲ್ಲಿ ಜನಿಸಿದರೂ, ಯಾವುದೇ ಸೌಲಭ್ಯಗಳು ಇಲ್ಲದಿದ್ದರೂ ಪರೀಕ್ಷೆಯಲ್ಲಿ ಉತ್ತಮ ದರ್ಜೆ ಪಡೆಯಬಹುದು ಎಂಬುದನ್ನು ಈ ಬಾರಿಯ ಪರೀಕ್ಷಾ ಫಲಿತಾಂಶ ಸಾಬೀತು ಪಡಿಸಿದೆ. ಬಳ್ಳಾರಿಯ 'ಇಂದು' ಪಿಯು ಕಾಲೇಜಿನ ವಿದ್ಯಾರ್ಥಿನಿ, ಅನಿತಾ ಪೂಜಾ ತಳ್ಳುಗಾಡಿಯಲ್ಲಿ ಬಾಳೆಹಣ್ಣು ಮಾರಿ ಹೊಟ್ಟೆಹೊರೆಯುವ ಬಡ ವ್ಯಾಪಾರಿಯೊಬ್ಬಳ ಪುತ್ರಿ. ದ್ವಿತೀಯ ಪಿಯುಸಿ ಕಲಾವಿಭಾಗದಲ್ಲಿ 600ಕ್ಕೆ 585 ಅಂಕ ಗಳಿಸಿ ರಾಜ್ಯಕ್ಕೆ ಮೊದಲ ಸ್ಥಾನ ಗಳಿಸಿದ್ದಾಳೆ. ಆಕೆ ಟ್ಯೂಷನ್‌ಗೆ ಹೋಗಲಿಲ್ಲ. ತಂದೆ ಬರುವ ತನಕ ರಾತ್ರಿವೇಳೆ ತಾಯಿಯ ಜೊತೆಗೆ ತಾನೂ ಮನೆಗೆಲಸದಲ್ಲಿ ನೆರವಾಗುತ್ತಿದ್ದಳು. ಟಿವಿ ಕೂಡ ನೋಡುತ್ತಿರಲಿಲ್ಲ. ಆದರೆ ತಪ್ಪದೆ ತರಗತಿಗೆ ಹಾಜರಾಗಿ ಗಮನವಿಟ್ಟು ಪಾಠ ಆಲಿಸುತ್ತಿದ್ದಳು. ದಿನಕ್ಕೆ ಐದಾರು ತಾಸು ಓದುತ್ತಿದ್ದಳು. ಪರೀಕ್ಷೆಯಲ್ಲಿ 5ನೇ ರ್‍ಯಾಂಕ್ ನಿರೀಕ್ಷಿಸುತ್ತಿದ್ದಳು. ಮೊದಲನೇ ಸ್ಥಾನ ಪಡೆದ ಅವಳ ಸಂತಸ ಹೇಳತೀರದು.

ವಿಜಯಪುರ ವಿಬಿ ದರಬಾರ ಪಿಯು ಕಾಲೇಜಿನ ವಿದ್ಯಾರ್ಥಿನಿ ಸಹನ 594 ಅಂಕಗಳಿಸಿ ವಾಣಿಜ್ಯ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾಳೆ. ತನ್ನ ಫಲಿತಾಂಶದ ಬಗ್ಗೆ ಆಕೆ ಹೇಳಿದ್ದು: 'ಓದಿಗೆ ಟೈಂ ಟೇಬಲ್ ಹಾಕಿಕೊಂಡಿರಲಿಲ್ಲ, ಕಷ್ಟಪಟ್ಟಿದ್ದಂತೂ ಇಲ್ಲವೇ ಇಲ್ಲ. ಓದುವಂತೆ ಯಾರೂ ನನಗೆ ಒತ್ತಡ ಹೇರಲಿಲ್ಲ. ಆದರೆ ತಾಳ್ಮೆಯಿಂದ ಓದಿ ವಿಷಯ ಮನನ ಮಾಡಿಕೊಳ್ಳುತ್ತಿದ್ದೆ. ಆದ್ದರಿಂದಲೇ ಈ ಫಲಿತಾಂಶ ಪಡೆಯಲು ಸಾಧ್ಯವಾಯಿತು. ಆಕೆಯ ಪೋಷಕರು ಸಹನಾಳ ಓದಿಗೆ ತೊಂದರೆಯಾಗಬಾರದೆಂದು ಹಲವು ದಿನಗಳ ಕಾಲ ಟಿವಿ

ಪುಟ 7 ಕ್ಕೆ ➤

➢ ಪುಟ 6 ರಿಂದ..... ಪರೀಕ್ಷೆ...

ನೋಡುವುದನ್ನೇ ಬಿಟ್ಟಿದ್ದರು. ಹೆಚ್ಚು ಸ್ಕೋರ್ ಮಾಡಬೇಕೆಂದು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಓದಬಾರದು. ಓದುವ ಆಸೆ ಚಿಗುರೊಡೆದಾಗ ಓದಿದ್ದೆಲ್ಲ ಮನಸ್ಸಿಗೆ ಮುದ ನೀಡುತ್ತದೆ. ಹೀಗಾಗಿ ಆಸಕ್ತಿಯಿಂದ ಓದುವ ಗೀಳು ಗಳಿಸಿಕೊಂಡರೆ ಪರೀಕ್ಷೆಗಳಲ್ಲಿ ಹೆಚ್ಚು ಸ್ಕೋರ್ ಮಾಡಬಹುದು ಎನ್ನುವುದು ವಿದ್ಯಾರ್ಥಿಗಳಿಗೆ ಸಹನಾಳ ಸಂದೇಶ.

ಅಪ್ಪ ಟೈಲರ್, ಬೇರೆಯವರ ಕೈಕೆಳಗೆ ಕೆಲಸ ಮಾಡುವ ವ್ಯಕ್ತಿ. ಇಂತಹ ಬಡತನದ ಮಧ್ಯೆಯೂ ಕಷ್ಟಪಟ್ಟು ಓದಿ ವಿಜ್ಞಾನ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನ ಎಂ.ರಮ್ಯಾಳ ಸಾಧನೆ ನಿಜಕ್ಕೂ ಅದ್ಭುತ. ಈಕೆಗೆ ಕಾಲೇಜಿನವರೇ ಪುಸ್ತಕಗಳನ್ನು ಖರೀದಿಸಲು ನೆರವಾಗಿದ್ದರು. ಜೊತೆಗೆ ಸ್ಕಾಲರ್‌ಶಿಪ್ ಕೂಡಾ ಕೊಟ್ಟಿದ್ದರು. ಮನಸ್ಸಿಟ್ಟು ಪ್ರತಿನಿತ್ಯ ಆರು ತಾಸು ಓದಿದ್ದರಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು.

ಎರಡೂ ಕೈಗಳಿಲ್ಲದ ಎಡಗಾಲಿನ ಹೆಬ್ಬೆರಳಿನಲ್ಲಿ ಪರೀಕ್ಷೆ ಬರೆದ ಬಳ್ಳಾರಿ ತಾಲ್ಲೂಕಿನ ಕೂಳಗಲ್ಲು ಗ್ರಾಮದ ವಿಶೇಷಚೇತನ ವಿದ್ಯಾರ್ಥಿ ಮುಸ್ತಾಫ್ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಪಡೆದದ್ದು ಶೇ 80ರಷ್ಟು ಅಂಕ. ಮನೆಯಲ್ಲಿ ಹೇಳತೀರದ ಬಡತನ. ಆದರೆ ಮುಸ್ತಾಫ್ ಓದಿನಲ್ಲಿ ಆಸಕ್ತಿ ಕಳೆದುಕೊಂಡಿರಲಿಲ್ಲ. ಭವಿಷ್ಯದಲ್ಲಿ ಐ ಎ ಎಸ್ ಮಾಡುವ ಗುರಿ ಹೊಂದಿರುವೆ ಎನ್ನುವ ಮುಸ್ತಾಫ್ ಯಾರಿಗೆ ತಾನೇ ಮೇಲ್ಪಂಕ್ತಿಯಾಗಲಾರ? ಸಾಧಿಸುವ ಛಲ, ತಕ್ಕ ಪ್ರಯತ್ನವಿದ್ದರೆ ಅಂಗವೈಕಲ್ಯವಿದ್ದರೂ ಸಾಧನೆ ಕಟ್ಟಿಟ್ಟ ಬುತ್ತಿ. ವಿಜಯಪುರದ ಅಂದ ವಿದ್ಯಾರ್ಥಿ ಕೃತ್ತಿಕಾ ಜಂಗನಮಠ ಅತ್ಯುತ್ತಮ ನಿದರ್ಶನ. ಈಕೆ ಈ ಬಾರಿಯ ಎಸ್.ಎಸ್.ಎಲ್.ಸಿ ಯಲ್ಲಿ ಶೇಕಡಾ 81 ರಷ್ಟು ಅಂಕ ಪಡೆದು ಅಚ್ಚರಿ ಮೂಡಿಸಿದ್ದಾಳೆ. ಕೃತ್ತಿಕಾಗೆ ತಾಯಿ ಪದ್ಮಾವತಿ ಸಹಾಯಕರಾಗಿ ಪರೀಕ್ಷೆ ಬರೆದಿದ್ದರು. ಕೃತ್ತಿಕಾ ಅಂದಳಾದರೇನು, ಸಂಗೀತದಲ್ಲೂ ಆಕೆಗೆ ಆಸಕ್ತಿ. ಈಗ ಕೊಳಲು ನುಡಿಸಲು ಕಲಿತಿದ್ದಾರೆ. ಉಡುಪಿ ಜಿಲ್ಲೆಯ ಪ್ರಜ್ಞಾ ಈ ಬಾರಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಒಟ್ಟು 594 ಅಂಕಗಳಿಸಿ ರಾಜ್ಯಕ್ಕೆ 3ನೇ ಸ್ಥಾನ ಪಡೆದಿದ್ದಾಳೆ. ಆಕೆ ಪ್ರತಿನಿತ್ಯ ಹೆಜಮಾಡಿಯಿಂದ 28 ಕಿ ಮಿ ದೂರದ ಉಡುಪಿಗೆ ಬಸ್ಸಿನಲ್ಲಿ ಬಂದುಹೋಗುತ್ತಿದ್ದಳು. ದಿನಕ್ಕೆ 4 ರಿಂದ 5 ಗಂಟೆ ಕಡ್ಡಾಯವಾಗಿ ಓದಿದ ಪ್ರಜ್ಞಾಗೆ ಈಗ ಎಲ್ಲಿಲ್ಲದ ಸಂತೋಷ. ಹರಪ್ಪನಹಳ್ಳಿಯ ಸಂತೋಷ್ ಸಿಳ್ಳೇರಾ ಸಂತೋಷ್ ಪಿಯುಸಿ ಕಲಾ ವಿಭಾಗದಲ್ಲಿ 3ನೇ ರ್‍ಯಾಂಕ್ ನಿದರ್ಶನ ಇನ್ನಷ್ಟು ಅಚ್ಚರಿ ಹುಟ್ಟಿಸುವಂತಾದ್ದು. ಈತನ ತಾಯಿ ಶಾಲೆಯಲ್ಲಿ ಬಿಸಿಯೂಟ ತಯಾರಕಳು. ಅದರಿಂದ ಬರುವ ಹಣದಿಂದಲೇ ಸಂತೋಷ್‌ಗೆ ಪುಸ್ತಕ, ಬಟ್ಟೆ ಇತ್ಯಾದಿ ವೆಚ್ಚ ನೋಡಿಕೊಂಡಿದ್ದಳು. ಭದ್ರಾವತಿಯ ಬಿ.ಎಸ್. ರಂಜನ್ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸಿ ಐತಿಹಾಸಿಕ ಸಾಧನೆ ಮಾಡಿರುವುದು ಇನ್ನೊಂದು ವಿಸ್ಮಯದ ವಿದ್ಯಮಾನ. ಈತ ಕೂಡ ಟ್ಯೂಷನ್‌ಗೆ ಹೋಗಿರಲಿಲ್ಲ. ಪ್ರತಿಷ್ಠಿತ ಶಾಲೆಯಲ್ಲೂ ಓದಿರಲಿಲ್ಲ. ಆದರೂ ಇದುವರೆಗೆ ಯಾರೂ ಮಾಡದ ಸಾಧನೆಯನ್ನು ಮಾಡಿದ್ದಾನೆ.

ಯಾವುದೇ ಸೌಲಭ್ಯಗಳು ಇರದಿದ್ದರೂ ಪರೀಕ್ಷೆಗಳಲ್ಲಿ ಸಾಧನೆ ಮಾಡಿದವರ ಉದಾಹರಣೆಗಳು ಸಾಕಷ್ಟಿವೆ. ಹೆಚ್ಚು ಅಂಕಗಳಿಸಲು ಪ್ರತಿಷ್ಠಿತ ಶಾಲೆ, ಟ್ಯೂಷನ್ ಇತ್ಯಾದಿ ಅಗತ್ಯವಿಲ್ಲ ಎಂಬ ಸಂದೇಶ ಈ ಎಲ್ಲಾ ಘಟನೆಗಳಿಂದ ರವಾನೆಯಾಗಿದೆ. ಈ ಬಾರಿಯ ಎಸ್.ಎಸ್.ಎಲ್.ಸಿ, ಪಿಯುಸಿ ಪರೀಕ್ಷಾ ಫಲಿತಾಂಶ ರವಾನಿಸಿರುವ ಇನ್ನೊಂದು ಅಚ್ಚರಿಯ ಸಂದೇಶವೂ ಇದೆ. ಎಸ್.ಎಸ್.ಎಲ್.ಸಿಯಲ್ಲಿ ಈ ಬಾರಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ಜಿಲ್ಲೆ ಬೆಂಗಳೂರು ಗ್ರಾಮಾಂತರ, ಉಡುಪಿ ದ.ಕ. ಅನಂತರ ಸ್ಥಾನಗಳು. ಆದರೆ ಆಶ್ಚರ್ಯವೆಂದರೆ ಪಿಯುಸಿ ಪರೀಕ್ಷೆಯಲ್ಲಿ ಮೊದಲ ಸ್ಥಾನಗಳಿಸಿರುವುದು ಉಡುಪಿ ಜಿಲ್ಲೆ. ಪಿಯುಸಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಏಕೆ ಮೊದಲಸ್ಥಾನ ಗಳಿಸಲಿಲ್ಲ ಎಂಬ ಸಂದೇಹ ಸಹಜ. ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪನಕ್ಕೂ ಪಿಯುಸಿ ಪರೀಕ್ಷೆಯ ಮೌಲ್ಯಮಾಪನಕ್ಕೂ ಇರುವ ಗುಣಮಟ್ಟದ ಅಂತರಕ್ಕೆ ಇದೊಂದು ನಿದರ್ಶನವಾಗಬಹುದು. ಈ ಬಾರಿ ರಾಜ್ಯದಲ್ಲಿ ಕಳೆದ ಬಾರಿಗಿಂತ ಹೆಚ್ಚು ಫಲಿತಾಂಶ ಬರುವಂತಾಗಬೇಕು ಎಂಬ ಶಿಕ್ಷಣ ಇಲಾಖೆಯ ಸೂಚನೆಯಂತೆ, ನೂರಕ್ಕೆ 22 ಅಂಕಗಳಿಸಿದವರನ್ನೂ ಕೃಪಾಂಕ ನೀಡಿ ಪಾಸು ಮಾಡಲಾಗಿದೆ. ಮೌಲ್ಯಮಾಪಕರಿಗೆ ಹಾಗೆ ಮಾಡಬೇಕೆಂಬ ಕಡ್ಡಾಯ ಸೂಚನೆಯೂ ಇತ್ತು. ಹೀಗಾಗಿ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಏರಿಕೆಯಾಗಿದೆ ಎಂದು ಬೆನ್ನುತಟ್ಟಿಕೊಳ್ಳಬಹುದೇ ಹೊರತು ವಿದ್ಯಾರ್ಥಿಗಳ ಗುಣಮಟ್ಟ ವೃದ್ಧಿಯಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಪಿಯುಸಿಯಲ್ಲಿ ಬಿಗಿಯಾದ ಮೌಲ್ಯಮಾಪನ ನಡೆಯುವುದರಿಂದಲೇ ಅಲ್ಲಿ ಯಾವುದೇ ಅನಿರೀಕ್ಷಿತಗಳು ಜರುಗಲು ಸಾಧ್ಯವಿಲ್ಲ. ಹಾಗಾಗಿ ಎಂದಿನಂತೆ ಉಡುಪಿ, ದ.ಕ ಜಿಲ್ಲೆಗಳೇ ಫಲಿತಾಂಶದಲ್ಲಿ ಮುಂದಿರುತ್ತವೆ.

ಖಾಸಗೀ ಶಾಲೆಗಳೇ ಉತ್ತಮ ಸರ್ಕಾರಿ ಶಾಲೆಗಳು ಕಳಪೆ ಎಂಬ ತಾತ್ಸಾರ ಮನೋಭಾವ ಹೊಂದಿರುವ ಈ ಕಾಲದ ಪೋಷಕರಿಗೆ ಈ ಬಾರಿಯ ಎಸ್.ಎಸ್.ಎಲ್.ಸಿಯ ಫಲಿತಾಂಶ ಒಂದು ಎಚ್ಚರಿಕೆಯ ಗಂಟೆ. ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶಗಳಲ್ಲಿ ಶೂನ್ಯ ಫಲಿತಾಂಶ ಪಡೆದ ಶಾಲೆಗಳಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳದ್ದೇ ಮೇಲುಗೈ. ಆದರೆ ರಾಜ್ಯಾದ್ಯಂತ ಶೂನ್ಯ ಫಲಿತಾಂಶ ಪಡೆದ ಸರ್ಕಾರಿ ಶಾಲೆಗಳ ಸಂಖ್ಯೆ ಕೇವಲ 3.

ಬಿಹಾರದಲ್ಲಿ ಈಚೆಗೆ ಪ್ರಕಟವಾದ 12ನೇ ತರಗತಿಯ ಪರೀಕ್ಷೆಯಲ್ಲಿ ಟಾಪರ್ ಆಗಿ ಹೊಮ್ಮಿದ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿದಾಗ ಅಚ್ಚರಿ ಕಾದಿತ್ತು. ಕಲಾವಿಭಾಗದಲ್ಲಿ ರೂಬಿ ರಾಯ್ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ವಿದ್ಯಾರ್ಥಿನಿಯಾಗಿದ್ದಳು. ಆದರೆ ರಾಜ್ಯ ಶಾಸ್ತ್ರ (ಪೊಲಿಟಿಕಲ್ ಸೈನ್ಸ್) ಎಂದರೇನು ಎಂಬ ಛಾನೆಲ್‌ಗಳ ಪ್ರಶ್ನೆಗಳಿಗೆ ಆಕೆ ಕೊಟ್ಟ ಉತ್ತರ "ಅದೊಂದು ಅಡಿಗೆ ಕುರಿತು ಮಾಡುವ ಅಧ್ಯಯನ" ವಿಜ್ಞಾನ ವಿಭಾಗದಲ್ಲಿ ಟಾಪರ್ ಆಗಿರುವ ಸರಳ ಸೂತ್ರಗಳಾದ ನೀರು ಮತ್ತು $H_2O$ ನಡುವಿನ ಸಂಬಂಧದ ಬಗ್ಗೆಯೇ ಗೊತ್ತಿಲ್ಲ. ಇದು ಬಿಹಾರದಲ್ಲಿ ಶಿಕ್ಷಣ ಮಾಫಿಯಾ

ಪುಟ 9 ಕ್ಕೆ ➢

# ಅಸಾಧಾರಣ ಸಾಹಸಿ ಜೆ.ಎನ್. ಟಾಟಾ

**ಭಾರತೀಯರ, ಕನ್ನಡಿಗರ, ಅದರಲ್ಲೂ ಬೆಂಗಳೂರಿಗರ ಹೆಮ್ಮೆಯ ಸಂಸ್ಥೆ ಭಾರತೀಯ ವಿಜ್ಞಾನಮಂದಿರ ಅಥವಾ ಟಾಟಾ ಇನ್‌ಸ್ಟಿಟ್ಯೂಟ್. ಈ ಸಂಸ್ಥೆಯ ಸ್ಥಾಪನೆಗೆ ಕಾರಣಕರ್ತರು ಕೆ.ಎನ್. ಟಾಟಾರವರಾದರೆ, ಅವರಿಗೆ ಪ್ರೇರಣೆ ನೀಡಿ ಬೆಂಗಳೂರಿನಲ್ಲಿ ವಿಜ್ಞಾನ ಮಂದಿರ ಸ್ಥಾಪನೆಯನ್ನು ಮನಗಾಣಿಸಿದರು ಸ್ವಾಮಿ ವಿವೇಕಾನಂದರು. ಇಡೀ ಜಗತ್ತಿನ ಗಮನಸೆಳೆದಿರುವ ಭಾರತೀಯ ವಿಜ್ಞಾನ ಮಂದಿರದ ಸ್ಥಾಪಕ ಶ್ರೀ ಕೆ.ಎನ್ ಟಾಟರವರ ಸಾಧನೆಗಳನ್ನು ಈ ಲೇಖನದ ಮೂಲಕ ಸ್ಮರಿಸುವ ಪ್ರಯತ್ನ ಇಲ್ಲಿದೆ.**

ಮುಂಬಯಿಗೆ ಮೋಟಾರ್ ಕಾರನ್ನು ತಂದ ಮೊದಲಿಗರು ಜೆಮ್‌ಸೆಟ್‌ಜಿ ನಸೆರ್‌ವಾಂಜಿ ಟಾಟಾ. ಚೀನಾದಿಂದ ರಿಕ್ಷಾಗಳನ್ನು ಆಮದು ಮಾಡಿ ಮುಂಬೈಯಲ್ಲಿ ಪ್ರಯಾಣ ಮತ್ತು ಸಾಗಾಣಿಕೆಗೆ ಹೊಸ ರೀತಿಯನ್ನು ಅವರು ಅಳವಡಿಸಿದರು. ಬರಗಾಲದಲ್ಲಿ ಕೊಳವೆ ಬಾವಿಯನ್ನು ತೋಡಿ ನೀರನ್ನು ಉಪಯೋಗಿಸುವ ಹೊಸ ವಿಧಾನವನ್ನು ತೋರಿಸಿಕೊಟ್ಟವರೂ ಟಾಟಾರವರೇ.

ಪರ್ಷಿಯಾ ದೇಶವನ್ನು ಮುಸ್ಲಿಮರು ಆಕ್ರಮಿಸಿದಾಗ ತಮ್ಮ ಧರ್ಮವನ್ನು ಬಿಡಲಾಗದೆ ದೇಶಬಿಟ್ಟು ಭಾರತದಲ್ಲಿ ಆಶ್ರಯ ಕೋರಿದವರು ಪಾರ್ಸಿಗಳು. ಇದೇ ಪಾರ್ಸಿ ಜನಾಂಗಕೆ ಟಾಟಾ ಸೇರಿದ್ದರು. 1839 ರಲ್ಲಿ ಜನಿಸಿದ ಜೆ.ಎನ್ ಟಾಟಾ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ 1858ರಲ್ಲಿ ಪದವಿ ಪರೀಕ್ಷೆಯನ್ನು ಪೂರೈಸಿದರು. ಆ ಕೂಡಲೇ ಅವರು ತಮ್ಮ ತಂದೆಯವರ ವ್ಯಾಪಾರ ವ್ಯವಹಾರದಲ್ಲಿ ಸೇರಿಕೊಂಡರು.

ಜಗತ್ತಿನಾದ್ಯಂತ ತಮ್ಮ ವ್ಯಾಪಾರದ ಅಭಿವೃದ್ಧಿಗಾಗಿ ಸಂಚರಿಸಿದ ಜೆ.ಎನ್. ಟಾಟಾ ಪ್ಯಾರೀಸ್, ನ್ಯೂಯಾರ್ಕ್, ಹಾಂಕಾಂಗ್, ಟೋಕಿಯೋಗಳಲ್ಲಿ ತಮ್ಮ ಮಳಿಗೆಗಳನ್ನು ಸ್ಥಾಪಿಸಿದರು. 1860ರ ದಶಕದಲ್ಲಿ ಅಮೇರಿಕಾದಲ್ಲಿ ಅಂತರ್ಯುದ್ಧದಿಂದ ಅಲ್ಲಿನ ಹತ್ತಿಯು ಇಂಗ್ಲೆಂಡಿಗೆ ರಫ್ತಾಗುವುದು ನಿಂತ ಸಂದರ್ಭವನ್ನು ಅರಿತು ಟಾಟಾರವರು ಭಾರತದಿಂದ ಹತ್ತಿಯ ರಫ್ತನ್ನು ಪ್ರಾರಂಭಿಸಿದರು. ಇಂಗ್ಲೆಂಡ್ ಯುದ್ಧದಲ್ಲಿ ತೊಡಗಿದಾಗ ಬ್ರಿಟಿಷ್ ಸೈನ್ಯಕ್ಕೆ ಆಹಾರ ಸರಬರಾಜಿನ ಒಪ್ಪಂದ ಮಾಡಿಕೊಂಡರು. ಮ್ಯಾಂಚೆಸ್ಟರ್‌ಗೆ ಹೋಗಿ ಅಲ್ಲಿ ಹತ್ತಿ ಕೈಗಾರಿಕೆಯ ನವೀನ ವಿಧಾನಗಳನ್ನು ಅರಿತು ಮುಂಬಯಿಯಲ್ಲಿ ಮೊದಲ ಹತ್ತಿ ಬಟ್ಟೆಯ ಗಿರಣಿಯನ್ನು ಪ್ರಾರಂಭಿಸಿದರು.

ಮುಂಬಯಿಯನ್ನು ಬಿಟ್ಟರೆ ಬೇರೆ ಯಾವ ನಗರಗಳೂ ಹತ್ತಿ ಬಟ್ಟೆಯ ಉದ್ಯಮಕ್ಕೆ ಅನುಕೂಲವಾಗಿಲ್ಲವೆಂಬುದು ಆಗಿನ ನಂಬಿಕೆ. ಟಾಟಾರವರು ಅದನ್ನು ಸುಳ್ಳಾಗಿಸಿದರು. ನಾಗಪುರದ ಬಳಿ ಹತ್ತು ಎಕರೆ ಭೂಮಿಯನ್ನು ಕೊಂಡು ಕಾರ್ಖಾನೆಯನ್ನು ಪ್ರಾರಂಭಿಸಿಯೇ ಬಿಟ್ಟರು. ಅದು ಮುಂದೆ ಎಂಪ್ರೆಸ್ ಮಿಲ್ ಎಂದು ಪ್ರಖ್ಯಾತವಾಯಿತು.

ಕಾರ್ಮಿಕರ ಬಗ್ಗೆ ಚಿಂತಿಸಿದ ಮಾಲೀಕರಲ್ಲಿ ಮೊದಲಿಗರು ಜೆ.ಎನ್. ಟಾಟಾ. ವಿಶ್ರಾಂತಿ ವೇತನ, ಗ್ರಾಚ್ಯೂಟಿ, ಪ್ರಾವಿಡೆಂಟ ಫಂಡ್, ಬೋನಸ್ ಮೊದಲಾದ ಅನುಕೂಲತೆಗಳನ್ನು ಸ್ವಪ್ರೇರಣೆಯಿಂದ ಟಾಟಾ ತಮ್ಮ ನೌಕರರಿಗೆ ನೀಡಿದರು.

ತಮ್ಮ ಕೈಗಾರಿಕೆಗಳ ವಿಸ್ತಾರವನ್ನು ಯೋಜನಾ ಬದ್ಧವಾಗಿ ಮಾಡುತ್ತಿದ್ದುದು ಅವರ ವಿಶೇಷ. ಪಾಂಡಿಚೇರಿಯಲ್ಲಿ ವಿಶೇಷ ಬಣ್ಣದ ಬಟ್ಟೆಯನ್ನು ತಯಾರಿಸಿ ಅದು ಫ್ರೆಂಚ್ ವಸಾಹತುಗಳಿಗೆ ರಫ್ತಾಗುವಂತೆ ಮಾಡಿದುದು ಈ ರೀತಿಯ ಪೂರ್ವ ತಯಾರಿಯಿಂದಲೇ ಸ್ವದೇಶಿ ಚಳುವಳಿಗೆ ಪೂರಕವಾಗುವಂತೆ ನಯವಾದ ಸ್ವದೇಶಿ ಬಟ್ಟೆಯ ತಯಾರಿಕೆಗೆ ಟಾಟಾ ಗಮನಕೊಟ್ಟರು. ಬ್ರಿಟಿಷರೊಂದಿಗೆ ಸ್ಪರ್ಧಿಸಲು ನಿಶ್ಚಯಿಸಿದ ಟಾಟಾ; ನಷ್ಟದಲ್ಲಿದ್ದ ಮುಂಬಯಿಯ ದರಂಸಿ ಮಿಲ್ಲ್‌ನ್ನು ಖರೀದಿಸಿದರು. ತಮ್ಮ ಸ್ವಂತ ಆಸ್ತಿಯನ್ನು ಮಾರಿ ಹೊಸಯಂತ್ರಗಳನ್ನು ಜೋಡಿಸಿ ಅದನ್ನು ಲಾಭದಾಯಕವಾಗಿ ನಡೆಯುವಂತೆ ಮಾಡಿದರು. ಅದಕ್ಕೆ ಸ್ವದೇಶಿ ಮಿಲ್ ಎಂದು ಹೆಸರಿಟ್ಟರು.

1892ರಲ್ಲಿ ಟಾಟಾ ತಮ್ಮದೇ ಖಾಸಗಿ ನಿಧಿಯೊಂದನ್ನು ಪ್ರಾರಂಭಿಸಿದರು. ಸಿವಿಲ್ ಸರ್ವಿಸ್ ಪರೀಕ್ಷೆ, ಕೈಗಾರಿಕೆ, ಶಿಲ್ಪ, ವ್ಯವಸಾಯ, ವೈದ್ಯಕೀಯ ಈ ರೀತಿ ವಿಶೇಷ ವಿಷಯಗಳಲ್ಲಿ ಪರಿಣತಿ ಪಡೆಯಲು ಇಚ್ಛಿಸುವ ತರುಣರನ್ನು ವಿದೇಶಗಳಿಗೆ ಶಿಕ್ಷಣಕ್ಕಾಗಿ ಹೋಗಲು ನೆರವು ನೀಡಿದರು.

ಜಪಾನಿಗೆ ಭೇಟಿ ನೀಡಿದ ಟಾಟಾ ಅಲ್ಲಿನ ರೇಷ್ಮೆ ಕೈಗಾರಿಕೆಯಲ್ಲಿ ಆಸಕ್ತಿ ತೋರಿದರು. ಭಾರತದಲ್ಲಿ ಅದಕ್ಕೆ ಸೂಕ್ತವಾದ ಪ್ರದೇಶವನ್ನು ಆರಿಸಿ ಬೆಂಗಳೂರಿನ ಟಾಟಾ ಸಿಲ್ಕ್ ಫಾರಂನಲ್ಲಿ ರೇಷ್ಮೆ ವ್ಯವಸಾಯದ ಶಿಕ್ಷಣದ ವ್ಯವಸ್ಥೆಯನ್ನು ಕಲ್ಪಿಸಿದರು. ಭಾರತದ ಪ್ರವಾಸಿಗಳನ್ನು ಆಕರ್ಷಿಸಲು ಅವರು ಹೋಟೆಲ್ ಉದ್ಯಮಕ್ಕೂ ಕೈಹಾಕಿದರು. ಮುಂಬಯಿಯ ತಾಜ್ ಮಹಲ್ ಹೋಟೆಲ್ ಇದೇ ಉದ್ದೇಶಕ್ಕಾಗಿ ಸ್ಥಾಪಿತವಾಯಿತು.

ವೈಜ್ಞಾನಿಕ ಶೋಧಗಳು ಪಾಶ್ಚಾತ್ಯ ದೇಶದಲ್ಲಿ ಮಾತ್ರ ಎಂಬುದನ್ನು ಸುಳ್ಳಾಗಿಸಲು ಅವರ ಪ್ರಯತ್ನವು ಪ್ರಾರಂಭವಾಯಿತು. ಅಪಾರ ತಾಳ್ಮೆ, ಅಧಿಕ ಹಣದ ಅಗತ್ಯ, ಮೇಧಾವಿತನದಿಂದ ಹಲವು ವರ್ಷ ಮಾಡಿದ ವಿಚಾರ ವಿನಿಮಯದಿಂದ ಈಗಿನ ಟಾಟಾ ವಿಜ್ಞಾನ ಮಂದಿರವು ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಅದರ ಖರ್ಚು ವೆಚ್ಚಗಳಿಗಾಗಿ ತಮ್ಮ ಆಸ್ತಿಯ ಉತ್ಪತ್ತಿಯನ್ನು ಅವರು ಮೀಸಲಿಟ್ಟರು.

ಬ್ರಿಟಿಷರ ಕಂಪನಿಗಳ ಕಬ್ಬಿಣ ಮತ್ತು ಉಕ್ಕು ಉತ್ಪಾದನೆಗೆ ಸವಾಲು ಹಾಕುವುದು ಅಸಾಧ್ಯವೆನ್ನುವ ಕಾಲ ಅದು. ಅಲ್ಲೂ ಟಾಟಾ ತಮ್ಮ ಗಮನ ಹರಿಸಿದರು. ಅದಕ್ಕಾಗಿ 20 ವರ್ಷ ಸತತ ಪ್ರಯತ್ನ ನಡೆಸಿದರು. ಭಾರತದ ಕಲ್ಲಿದ್ದಲು ನೀಡುವ

**ಪುಟ 9 ಕ್ಕೆ ➤**

➢ ಪುಟ 3 ರಿಂದ..... ಗುರುಪೂರ್ಣಿಮೆ...

ನರೇಂದ್ರನಾಗಿದ್ದವರು ರಾಮಕೃಷ್ಣಪರಮಹಂಸರನ್ನು ಗುರುವೆಂದು ಒಪ್ಪಿಕೊಂಡದ್ದು, ಅವರೂ ಆತನನ್ನು ಶಿಷ್ಯನೆಂದು ಸ್ವೀಕರಿಸಿದ್ದೂ ಹೀಗೇ ತಾನೇ?

ಗುರುವಿಗೆ ತ್ರಿಮೂರ್ತಿಗಳ ಸ್ಥಾನವೂ ಸಲ್ಲುತ್ತದೆ. 'ಗುರುರ್ಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ। ಗುರುರ್ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ' ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಇಂತಹ ಉನ್ನತ ಸ್ತರದ ಸ್ಥಾನವನ್ನು ನೀಡಲಾಗಿದೆ. ಏಕೆಂದರೆ ಗುರುವಿನ ವ್ಯಕ್ತಿತ್ವವೇ ಅಂತಹದು. ಆತನ ಧ್ಯೇಯವೇ ಮಹತ್ವಪೂರ್ಣವಾದುದು ಆತನಿಗೆ ಸಮಾಜದಲ್ಲಿ ಸದಾ ಮಂಗಲಕರವಾದದ್ದನ್ನೇ ಕಾಣುವ ಬಯಕೆ ಅದನ್ನು ಸಾಧಿಸಲು ಆತನ ಪ್ರಯತ್ನ ಸತತವಾಗಿ ನಡೆಯುತ್ತದೆ. ಒಂದು ಮಹೋನ್ನತ ಸಂಸ್ಕೃತಿಯ ಸಾಮ್ರಾಜ್ಯವನ್ನೇ ಕಟ್ಟುವ ಗುರಿ ಆತನದು. ಈ ಪವಿತ್ರವಾದ ಕಾರ್ಯ ಶಿಷ್ಯನಿಂದಲೂ ಮುಂದುವರಿಯು-ತ್ತಿತ್ತೆಂಬುದನ್ನು ನಮ್ಮ ಇತಿಹಾಸ, ಪುರಾಣಗಳಲ್ಲಿನ ನಿದರ್ಶನಗಳಲ್ಲಿ ಕಾಣುತ್ತೇವೆ.

'ಶಿಷ್ಯನಾದವನು ತನ್ನ ಗುರುವಿನ ಉಪದೇಶವನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡ ನಂತರದಲ್ಲಿ ಆ ಗುರುವಿನ ಅನುಭವವೇ ಅವನಿಗೆ ಸಾಕ್ಷಾತ್ತಾಗಿ ಆಗುತ್ತದೆ. ಆಗಲೇ ಅವನ ಅಧ್ಯಯನ ಪೂರ್ಣವಾಗುತ್ತದೆ. ಆಗ, ಅವನ ವಿದ್ಯೆ ಸ್ವಂತವಾಗಿ ಪರಿಣಮಿಸಿ, ಕಾಲಾಂತರದಲ್ಲಿ ತನ್ನ ಬಳಿಗೆ ಬಂದ ಶಿಷ್ಯರಿಗೆ ಗುರುವಾಗಿ, ತಾನು ಬೋಧಿಸುವದು ತನ್ನ ಗುರುವಿನ ಅನುಗ್ರಹದಿಂದ ತಿಳಿದ ಉಪದೇಶವೆಂದೇ ಭಾವಿಸಿ ಬೋಧಿಸುತ್ತಾನೆ. ಹೀಗೆ ಗುರು ಶಿಷ್ಯರ ಪರಂಪರೆ ಒಂದು ಪಾವಿತ್ರ್ಯದ ಆಧಾರದೊಂದಿಗೆ ಮುಂದುವರಿಯುತ್ತದೆ'. ಉಪನಿಷತ್ತಿನಲ್ಲಿ ಹೀಗೆ ಹೇಳಿದೆ.

ಗುರುಪೂರ್ಣಿಮೆಯ, ವ್ಯಾಸ ಪೂರ್ಣಿಮೆಯ ಹಿನ್ನೆಲೆ ಇದು. ಇದನ್ನು ಸ್ಮರಿಸುತ್ತ ಆಚರಣೆ ಮಾಡುವುದು ಅಗತ್ಯ. ಪ್ರಸ್ತುತ ದಿನಗಳಲ್ಲಿ ಗುರು-ಶಿಷ್ಯ ಸಂಬಂಧಗಳು ಜಾಳಾಗುತ್ತ ಬಂದಿದ್ದರೂ, ಕೇವಲ ಒಂದು ಪ್ರದರ್ಶನವಾಗಿ '**ಶಿಕ್ಷಕರದಿನ**'ವನ್ನು ಹಲವು ಕಡೆಗಳಲ್ಲಿ ಆಚರಿಸುತ್ತಿದ್ದರೂ ಯೋಗ್ಯ ಗುರು, ಯೋಗ್ಯ ಶಿಷ್ಯರ ಸಂಬಂಧದಲ್ಲಿ ಅದೇ ಪೂಜ್ಯಭಾವನೆ ಉಳಿದಿದೆ. ಅದರಿಂದಲೇ ಗುರುಪೂರ್ಣಿಮೆಯ ಮಹತ್ವವನ್ನು ಕೆಲವರಾದರೂ ತಿಳಿದು ಗೌರವಿಸುವ ಸಂಪ್ರದಾಯ ಉಳಿದುಕೊಂಡಿದೆ.

'ವರ್ಣಮಾತ್ರಂ ಕಲಿಸಿದಾತಂ ಗುರು' ಎಂಬುದನ್ನು ಮರೆಯದೆ, ನಮಸ್ಕರಿಸುತ್ತಾ, ಲೋಕಗುರುವಾದ ಮಹರ್ಷಿ ವೇದವ್ಯಾಸರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುವ ಪರಮ ಪವಿತ್ರವಾದ ದಿನ ಗುರುಪೂರ್ಣಿಮೆ.

●

➢ ಪುಟ 7 ರಿಂದ..... ಪರೀಕ್ಷೆ...

ಎಷ್ಟೊಂದು ಸಕ್ರಿಯವಾಗಿದೆ ಎನ್ನುವುದನ್ನು ಬಯಲು ಮಾಡಿದೆ. ಈಗ ತೀವ್ರ ಮುಜುಗರಕ್ಕೆ ಈಡಾಗಿರುವ ಅಲ್ಲಿನ ಶಿಕ್ಷಣ ಇಲಾಖೆ ಟಾಪರ್‌ಳೂ ಸೇರಿದಂತೆ 15 ಲಕ್ಷ ವಿದ್ಯಾರ್ಥಿಗಳಿಗೆ ಮತ್ತೆ ಮರುಪರೀಕ್ಷೆ ನಡೆಸಲು ನಿರ್ಧರಿಸಿದೆ. ಆದರೆ ಈ ಮರುಪರೀಕ್ಷೆಯಲ್ಲಿ ಮತ್ತೆ ಸಾಮೂಹಿಕ ನಕಲು ನಡೆಯುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ?

ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸುವುದೇ ವಿದ್ಯಾಭ್ಯಾಸದ ಪರಮ ಗುರಿಯಾಗಿರಬೇಕು? ಶಿಕ್ಷಣದ ಮೂಲಕ ಕೇವಲ ಪದವಿ ಪಡೆದರಷ್ಟೇ ಸಾಕೆ? ನಮ್ಮ ಶಿಕ್ಷಣ ಪದ್ಧತಿ ವ್ಯಕ್ತಿಗಳನ್ನು ಅಕ್ಷರವಂತರನ್ನಾಗಿ ಮಾಡಿದರೆ ಸಾಲದು, ಅವರನ್ನು ಮನುಷ್ಯರನ್ನಾಗಿ ರೂಪಿಸಬೇಕು. ಅಂತಹ ಶಿಕ್ಷಣ ವ್ಯವಸ್ಥೆಗೆ ನಾವು ಆದ್ಯತೆ ಕೊಡುವುದು ಯಾವಾಗ? ಶಿಕ್ಷಣ ತಜ್ಞರು, ಪೋಷಕರು ಈ ಬಗ್ಗೆ ಚಿಂತಿಸಬೇಕಾಗಿದೆ.

**ಕೃಪೆ : ಹೊಸದಿಗಂತ**

➢ ಪುಟ 8 ರಿಂದ..... ಜೆ. ಎನ್. ಟಾಟಾ...

ಶಾಖವನ್ನು ಹೆಚ್ಚಿಸುವ ರೀತಿಯನ್ನು ಕಂಡುಹಿಡಿಯಲು ಇಂಗ್ಲೆಂಡಿಗೆ ಹೋದರು. ಅಲ್ಲಿ ಮಂತ್ರಿಗಳನ್ನು ಭೇಟಿಮಾಡಿ ತಮ್ಮ ಯೋಜನೆಗೆ ಅನುಮತಿಯನ್ನು ದೊರಕಿಸಿಕೊಂಡರು ಕಬ್ಬಿಣ ಕರಗಿಸುವ ವಿಧಾನವನ್ನು ಅಧ್ಯಯನ ಮಾಡಲು ಜರ್ಮನಿಗೆ ಭೇಟಿ ಕೊಟ್ಟರು. ಹೀಗೆ ಪ್ರಾರಂಭವಾದ ಮೊಟ್ಟ ಮೊದಲ ಉಕ್ಕಿನ ಕಾರ್ಖಾನೆಯು ಅವರದ್ದೇ ಹೆಸರಿನ ಜಮ್‌ಷೆಡ್‌ಪುರದಲ್ಲಿದೆ.

ಪಶ್ಚಿಮ ಘಟ್ಟದಲ್ಲಿ ಹರಿಯುವ ನದಿಗಳ ನೀರು ವ್ಯರ್ಥವಾಗಿ ಸಮುದ್ರವನ್ನು ಸೇರುವುದು ತಪ್ಪಿ ಅದರಿಂದ ವಿದ್ಯುತ್ ಉತ್ಪಾದನೆಗೆ ದಾರಿಯಾಗುವುದೇ ಎನ್ನುವ ಹೊಸ ಆಲೋಚನೆಯೊಂದು ಟಾಟಾರವರ ಮನಸ್ಸಿನಲ್ಲಿ ಹುಟ್ಟಿಕೊಂಡಿತು. ಅದಕ್ಕಾಗಿ ಟಾಟಾ ಹೈಡ್ರೋ ಎಲೆಕ್ಟ್ರಿಕ್ ವಿದ್ಯುಚ್ಛಕ್ತಿಯಿಂದ ಬೆಳಗಿತು. ಟಾಟಾರವರ ಕೈಗಾರಿಕಾ ಉದ್ಯಮಗಳು ಆವರಿಸದ ಕ್ಷೇತ್ರಗಳೇ ಇಲ್ಲವೆನ್ನಬಹುದು. ಅಷ್ಟೇ ಅಲ್ಲ ಅವರ ಉದ್ಯಮಗಳು ತಮ್ಮ ಉತ್ಪಾದನೆಯ ಉತ್ಕೃಷ್ಟತೆಗೆ ದೇಶದಲ್ಲೇ ಮಾದರಿಯಾಗಿವೆ.

ಅವರ ಸಾಮಾಜಿಕ ಆಸಕ್ತಿಯೂ ವಿಶೇಷವೇ. ಮೊದಲ ಬಾರಿ ಪ್ಲೇಗ್ ರೋಗದ ಲಸಿಕೆಯು ಭಾರತಕ್ಕೆ ಬಂದಿತು. ಅದನ್ನು ಹಾಕಿಸಿಕೊಳ್ಳಲು ಜನರು ಅಂಜುತ್ತಿದ್ದರು. ಟಾಟಾರವರು ತಮ್ಮ ಕಾರ್ಮಿಕರನ್ನು ಒಂದೆಡೆ ಸೇರಿಸಿ ಅವರ ಮುಂದೆ ತಾವೂ ಮತ್ತು ತಮ್ಮ ಮಗನೂ ಸೇರಿ ಬಹಿರಂಗವಾಗಿ ಚುಚ್ಚುಮದ್ದನ್ನು ಹಾಕಿಸಿಕೊಂಡರು. ಬದಲಾವಣೆಗೆ ಸಿದ್ಧರಾಗಬೇಕೆನ್ನುವ ಮಾದರಿಯನ್ನು ಹಾಕಿದರು.

ಭಾರತದ ಕೈಗಾರಿಕಾ ಕ್ಷೇತ್ರದಲ್ಲಷ್ಟೇ ಅಲ್ಲ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಗಮನ ಹರಿಸಿ ಅಲ್ಲಿ ಹೊಸ ಹುರುಪನ್ನು ತಂದು ಕೊಟ್ಟವರು ಜೆಮ್‌ಸೆಟ್‌ಜಿ ವಸೆರ್‌ವಾಂಜಿ ಟಾಟಾ.

**ಕೃಪೆ: ಹಿಂದು ವಾಣಿ**

# ಉತ್ತರ ಜಿಲ್ಲೆಯ ಪದಾಧಿಕಾರಿಗಳ ಆಯ್ಕೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯು ದಿನಾಂಕ :30.5.2016 ರಂದು ಪದಾಧಿಕಾರಿಗಳ ಆಯ್ಕೆಮಾಡಲಾಗಿದೆ. ಅದು ಕೆಳಕಂಡಂತಿದೆ.

1. **ಗೌರವಾಧ್ಯಕ್ಷ :** ಜೆ.ಎಂ. ಜೋಷಿ ; 2. **ಅಧ್ಯಕ್ಷ :** ಎಸ್. ಜಿ. ತಾಂಬೆ ; 3. **ಪ್ರಧಾನ ಕಾರ್ಯದರ್ಶಿ:** ಗಂಗಪ್ಪ ; 4. **ಉಪಾಧ್ಯಕ್ಷರು :** ಎ.ಸಿ. ಪ್ರದೀಪ್ ; 5. **ಖಜಾಂಚಿ :** ಬಿ.ಆರ್. ಹರಿದಾಸ್ ; 6. **ಸಂಘಟನಾ ಕಾರ್ಯದರ್ಶಿ –** ಜನಾರ್ಧನ್ ಎಂ.ವಿ ; 7. **ಸಹಕಾರ್ಯದರ್ಶಿ :** ವಿಶ್ವನಾಥ್ ಜಿ.ಆರ್ ; 8. **ಸಹ ಕಾರ್ಯದರ್ಶಿ :** ಕುಮಾರ್ ಎನ್.

**ಕಾರ್ಯಕಾರಿಣಿ ಸಮಿತಿ :** 1. ಎಲ್. ಜಿ. ನಾರಾಯಣ; 2. ಕೆ. ಸುಬ್ಬರಾಜು; 3. ವಿ. ನಾರಾಯಣ; 4. ಶಿವಕುಮಾರ ಸ್ವಾಮಿ; 5. ಮಂಜುನಾಥ್ ಟಿ.ಆರ್. **ಮಹಿಳಾ ಸಂಘಟನಾ ಕಾರ್ಯದರ್ಶಿ :** ಶ್ರೀಮತಿ ಛಾಯಾದೇವಮ್ಮ.



## ಅಭಿನಂದನೆಗಳು

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಉತ್ತರ ಜಿಲ್ಲೆಯಲ್ಲಿ ಹಿರಿಯ ಕಾರ್ಯಕರ್ತರಾದ ಶ್ರೀ ಲಕ್ಷ್ಮಣ್ ರಾವ್ ಅವರ ಮೊಮ್ಮಗ ಆದಿತ್ಯ ಜಿ. ಹಳ್ಳಿಮಾಳ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 98.72% (617) ಅಂಕ ಗಳಿಸಿದ್ದಾನೆ. ಶಿಕ್ಷಕ ಸಂಘವು ಈ ವಿದ್ಯಾರ್ಥಿಗೆ ಇನ್ನೂ ಹೆಚ್ಚು ಸಾಧನೆ ಮಾಡಲಿ ಎಂದು ಹಾರೈಸುತ್ತದೆ.**

## ವಿದ್ಯಾರ್ಥಿ ಮಿತ್ರ – 25

– ವಿ. ರಾಜ, ಅಧ್ಯಾಪಕರು,
ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

## ಪದಬಂಧ

ಎಡದಿಂದ ಬಲಕ್ಕೆ

1. ಸಂತನಿಗೆ ಯಾವ ವಂಶವೂ ಇರುವುದಿಲ್ಲ (3)
3. ಈ ಕಾಡು ಬೆಂದಂತೆ ಕಾಣುತ್ತದೆ (3)
5. ಡಿ.ವಿ.ಜಿ.ಯವರು ತಮ್ಮ ನೆನಪುಗಳನ್ನು ಸ್ಮರಿಸಿ ಚಿತ್ರಿಸಿದ ಪುಸ್ತಕ (6)
7. ಕುವೆಂಪು ಅವರ ಹೆಗ್ಗಡತಿ ಈ ಊರಿನವಳು (3)
10. ಮಹಾರಾಷ್ಟ್ರ–ಕರ್ನಾಟಕ ಗಡಿಯ ವಿಷಯವಾಗಿ ಪ್ರಕಟಗೊಂಡ ಮಹಾಸುದ್ದಿ (7)
13. ನಾಗರೀಕರಿರುವ ಊರು (3)
14. ಇವರು ಕೌರವರ ಮಂತ್ರಿ (3)

ಮೇಲಿಂದ ಕೆಳಕ್ಕೆ

1. ಇದು ಹಳ್ಳಿಯ ಮಾರುಕಟ್ಟೆ (2)
2. ತಿಮ್ಮಪ್ಪ ಏಳು ಬೆಟ್ಟದ ಮೇಲಿದ್ದಾನೆ (4)
3. ಶರೀರವನ್ನು ಬಿಸಿಯನ್ನಾಗಿಸಲು ನೀಡಿದ ಬಿಸಿ (4)
4. ಒಂಟೆಯ ಬೆನ್ನನ್ನು ಸುಬ್ಬು ಹೀಗೆಂದನು (2)
6. ಶಾಶ್ವತವಾದ ಹೊಸತನವಿದು (5)
8. ಹಾರಾಡುವ ಜನರು ಮಾಡಿದ ಗೋಳಾಟ (4)
9. ಬೇಂದ್ರೆಯವರಿಗಿದ್ದ ಬಿರುದು (4)
11. ವಿದ್ಯೆಯಿಂದ ಇದು ದೊರೆಯುತ್ತದೆ (2)
12. ನೇಸರನ ಬಳಿಗೆ ಸೀದ ದಾರಿ ಇದೆ (2)

| | | | | | | | | |
|---|---|---|---|---|---|---|---|---|
| 1 | | 2 | ■ | ■ | ■ | 3 | | 4 |
| | ■ | | ■ | ■ | ■ | | ■ | |
| ■ | 5 | | | 6 | | | | ■ |
| ■ | ■ | | ■ | | ■ | | ■ | ■ |
| ■ | ■ | ■ | 7 | | | ■ | ■ | ■ |
| ■ | ■ | 8 | ■ | | ■ | 9 | ■ | ■ |
| ■ | 10 | | | | | | | ■ |
| 11 | ■ | | ■ | ■ | ■ | | ■ | 12 |
| 13 | | | ■ | ■ | ■ | 14 | | |

## ವಿದ್ಯಾರ್ಥಿ ಮಿತ್ರ 25 ರ ಉತ್ತರ

**ಎಡದಿಂದ ಬಲಕ್ಕೆ :** 1. ಸಂತತಿ ; 3. ಬೆಂಗಾಡು ; 5. ಜ್ಞಾಪಕ ಚಿತ್ರಶಾಲೆ ; 7. ಕಾನೂರು ; 10. ಮಹಾಜನವರದಿ ; 13. ನಗರ ; 14. ವಿಧುರ

**ಮೇಲಿನಿಂದ ಕೆಳಕ್ಕೆ :** 1. ಸಂತೆ ; 2. ತಿರುಪತಿ ; 3. ಬೆಂಕಿಶಾಖ ; 4. ಡುಬ್ಬ ; 6. ಚಿರನೂತನ; 8. ಹಾಹಾಕಾರ ; 9. ವರಕವಿ ; 11. ಜ್ಞಾನ ; 12. ನೇರ

# ಹಳ್ಳಿ ಹೈದ, ಸಾಧನೆಯಿಂದ ವಿಶ್ವವಿದ್ಯಾಲಯದ ಕುಲಪತಿಯಾದ ಕಥೆ



ಆ ಹುಡುಗ ಹುಟ್ಟಿದ್ದು ಅತಿ ಹಿಂದುಳಿದ ಜಾತಿಯಲ್ಲಿ 6–6–1920 ರಂದು. ತಂದೆ–ತಾಯಿ ನಿರಕ್ಷರ ಕುಕ್ಷಿಗಳು. ಅವರ ಅಪಾರ ಸಂಪತ್ತೆಂದರೆ ಕಿತ್ತು ತಿನ್ನುವ ಬಡತನ. ಒಪ್ಪತ್ತಿಗಿದ್ದರೆ ಅಷ್ಟೇ ಪುಣ್ಯ. ಮತ್ತೊಂದು ಹೊತ್ತಿಗೆ ನೀರೇ ಆಹಾರ. ಅವರಿದ್ದ ಊರು ಒಂದು ಸಾಮಾನ್ಯ ಹಳ್ಳಿ. ಗೌರೀಬಿದನೂರು ತಾಲ್ಲೂಕಿನ ಹೊಸೂರು. ಅಂದಿನ ಲೋಯರ್ ಸೆಕೆಂಡರಿ ವಿದ್ಯಾಭ್ಯಾಸವನ್ನು ಹೊಸೂರಿನ ಶಾಲೆಯಲ್ಲಿ ಮುಗಿಸಿ ಮುಂದೇನು ಮಾಡಬೇಕೆಂಬ ಜಿಜ್ಞಾಸೆ. ಓದಲು ಸೌಕರ್ಯವಿಲ್ಲ, ಉಡಲು ಒಳ್ಳೆಯ ಬಟ್ಟೆಯಿಲ್ಲ. ಆದರೆ ಒಂದಂತೂ ಪ್ರಬಲವಾಗಿತ್ತು. ಅದೇ ಓದಬೇಕೆಂಬ ಛಲ. ಏನನ್ನಾದರೂ ಸಾಧಿಸಬೇಕೆಂಬ ಹಠ.

ಆಗ ಆ ಬಾಲಕನ ನೆರವಿಗೆ ಬಂದವರು ಅವನ ಶಾಲೆಯ ಉಪಾಧ್ಯಾಯರು. ಆ ಶಿಕ್ಷಕರು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿಗೆ ಸೇರುವಂತೆ ಸೂಚಿಸಿ ಪರಿಚಿತ ಅಧ್ಯಾಪಕರಿಗೆ ಕಾಗದ ಕೊಟ್ಟರು. ಹೊಸೂರಿನಿಂದ ಬೆಂಗಳೂರಿಗೆ ಸುಮಾರು 60 ಮೈಲಿ ಬಸ್ಸಿನಲ್ಲಿ ಬರಲು ಕಾಸಿಲ್ಲ. ಸರಿ, ಸಣ್ಣ ಗಂಟು ಹೊತ್ತು ಜೇಬಲ್ಲಿ ಎಂಟಾಣೆ ಇಟ್ಟುಕೊಂಡು ನ್ಯಾಷನಲ್ ಹೈಸ್ಕೂಲಿಗೆ ನಡದೇ ಬಂದ. ಆಗಿನ್ನೂ ಆ ಬಾಲಕನಿಗೆ 13–14 ವರ್ಷ ಅಷ್ಟೇ. ನ್ಯಾಷನಲ್ ಹೈಸ್ಕೂಲ್ ಅವನಿಗೆ ವಿದ್ಯೆ ಕೊಟ್ಟಿದ್ದಷ್ಟೇ ಅಲ್ಲ ಅವನ ಬದುಕನ್ನೂ ರೂಪಿಸಿತು. ನ್ಯಾಷನಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ಬಿ.ಎಸ್.ಸಿ. (ಆನರ್ಸ್) ಮತ್ತು ಎಂ. ಎಸ್. ಸಿ. ಪದವಿ ಪಡೆದು 1946 ರಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಉಪನ್ಯಾಸಕ ಹುದ್ದೆಗೆ ಸೇರಿದ ನರಸಿಂಹಯ್ಯ ಎಂಬ ಆ ಬಾಲಕ ಜೀವನದಲ್ಲಿ ಅತಿ ಎತ್ತರಕ್ಕೆ ಬೆಳೆದು ಡಾಕ್ಟರ್ ಹೆಚ್. ಎನ್. ಎಂದು ಖ್ಯಾತನಾಮರಾದರು.

ಡಾ. ಹೆಚ್. ಎನ್. ಸ್ವಾತಂತ್ರ್ಯ ಸಂಗ್ರಾಮದ 'ಕ್ವಿಟ್ ಇಂಡಿಯಾ' ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ಸೇರಿ, ಗಾಂಧೀಜಿಯವರ ಅನುಯಾಯಿಯಾಗಿ ಜೀವನಪೂರ್ತಿ ವ್ರತಧಾರಿಯಾಗಿ ತಮ್ಮ ಜೀವನವನ್ನು ನ್ಯಾಷನಲ್ ಹೈಸ್ಕೂಲಿನ ಧ್ಯೇಯವಾದ 'ತ್ಯಾಗ– ಸೇವೆ'ಗಳಿಗೆ ಮುಡಿಪಿಟ್ಟರು. ತಮ್ಮ ಧ್ಯೇಯ ಸಾಧನೆಗಾಗಿ ಶಿಕ್ಷಣ ಕ್ಷೇತ್ರವನ್ನು ಆರಿಸಿಕೊಂಡರು.

'ಸರಳ ಜೀವನ – ಉದಾತ್ತ ಚಿಂತನೆ' ಯ ಆದರ್ಶದಂತೆ, ಕಾಲೇಜಿನ ಹಾಸ್ಟೆಲ್‌ನ ಒಂದು ಕೊಠಡಿಯಲ್ಲಿ ವಾಸವಿದ್ದರು. 59 ವರ್ಷಗಳ ಕಾಲ ವಾಸವಿದ್ದರು. ಚಾಪೆಯೇ ಹಾಸಿಗೆ, ಮೈಮೇಲೆ ಖಾದಿ ಷರಟು, ಖಾದಿ ಪಂಚೆ, ಗಾಂಧೀ ಟೋಪಿ, ಹಾಸ್ಟೆಲ್‌ನಲ್ಲಿ ಒಂದು ಜೊತೆ ಒಗೆದ ಬಟ್ಟೆ. ಹೀಗಿತ್ತು ಅವರ ಸರಳ ಜೀವನ.

**ಆದರ್ಶ ಅಧ್ಯಾಪಕ :** ಅಧ್ಯಾಪಕ ವೃತ್ತಿ ಅವರು ಇಚ್ಛೆ ಪಟ್ಟು ಆರಿಸಿಕೊಂಡಿದ್ದು. ಆ ವೃತ್ತಿಯಲ್ಲೇ ಮೇಲೇರಿ ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿಗಳೂ ಆಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆಗೆ ನಾಡೋಜ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಭಾರತ ಸರ್ಕಾರದ ಪದ್ಮ ಭೂಷಣ ಮುಂತಾದ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಅವರನ್ನು ಅರಸಿ ಬಂದವು

ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಪ್ರಯೋಗಗಳು ಹಲವಾರು. ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿದ್ದಾಗ ಅಧ್ಯಾಪಕರ ಹಾಜರಿ ಪುಸ್ತಕವನ್ನು ತೆಗೆದು ಹಾಕಿ ಅಧ್ಯಾಪಕರ ಮೇಲೆ ನಂಬಿಕೆ ವಿಶ್ವಾಸಗಳ ಭಾವ ವ್ಯಕ್ತಪಡಿಸಿದ್ದು, ಮೇಲ್ವಿಚಾರಣೆ ಇಲ್ಲದೆ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳಿಗೆ ಪ್ರಾಮಾಣಿಕತೆಯ ಪಾಠ ಕಲಿಸಿದ್ದು, ಒಂದೇ, ಎರಡೇ, ಈ ಪಟ್ಟಿ ಹನುಮಂತನಬಾಲ. ಡಾ. ಹೆಚ್. ಎನ್. ರವರು ನ್ಯಾಷನಲ್ ಹೈಸ್ಕೂಲ್, ಕಾಲೇಜುಗಳನ್ನು ನಡೆಸುತ್ತಿದ್ದ ನ್ಯಾಷನಲ್ ಎಜುಕೇಶನ್ ಸೊಸೈಟಿಯ ಅಧ್ಯಕ್ಷರಾಗಿ ತಮ್ಮ ಅಂತ್ಯ ಕಾಲದವರೆಗೂ ಅದನ್ನು ಮುನ್ನಡೆಸಿದರು.

ನಾನು ಅಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದ, ಚನ್ನೇನಹಳ್ಳಿ ನಿಲಯ ಪ್ರೌಢಶಾಲೆ ಜನಸೇವಾ ವಿದ್ಯಾಕೇಂದ್ರವು 1975 ರ ತುರ್ತು ಪರಿಸ್ಥಿತಿಯ ನಿಮಿತ್ತ ಅಂದಿನ ಕಾಂಗ್ರೆಸ್ ಸರ್ಕಾರದಿಂದ ಮುಚ್ಚಲ್ಪಟ್ಟಿತು. ಆಗ 1976 ರಲ್ಲಿ ನಾನು ಬಸವನಗುಡಿ ನ್ಯಾಷನಲ್ ಹೈಸ್ಕೂಲಿನಲ್ಲಿ ಗಣಿತ –ವಿಜ್ಞಾನದ ಅಧ್ಯಾಪಕನಾಗಿ ನಿಯುಕ್ತಿಗೊಂಡೆ. 1960 ರಲ್ಲೇ ನ್ಯಾಷನಲ್ ಕಾಲೇಜಿನಲ್ಲಿ ಓದಲು ಪ್ರವೇಶಾವಕಾಶ ವಿದ್ದರೂ, ಬೆಂಗಳೂರಿನಲ್ಲಿ ಓದಿಸಲು ಸಾಧ್ಯವಾಗದೆ ನಮ್ಮ ತಂದೆಯವರು ಮೈಸೂರಿನ ಶಾರದವಿಲಾಸ್ ಕಾಲೇಜಿಗೆ ಸೇರಿಸಿದರು. ನಾನು ಓದಿದ ಹೊಳೆನರಸಿಪುರದ ಹೈಸ್ಕೂಲಿನ ನನ್ನ ಅನೇಕ ಗೆಳೆಯರು ನ್ಯಾಷನಲ್ ಕಾಲೇಜಿನಲ್ಲಿ ಅವರ ಶಿಷ್ಯರಾಗಿದ್ದರು. ಅವರ ಮೂಲಕ ಹೆಚ್.ಎನ್. ರವರ ವ್ಯಕ್ತಿತ್ವ ಪರಿಚಯವಾಗಿತ್ತು. ಅಧ್ಯಾಪಕನಾದ ನಂತರ 29 ವರ್ಷಗಳ ಕಾಲ ಅವರ ನಿಕಟ ಸಂಪರ್ಕ ಲಭ್ಯವಾಗಿತ್ತು. ಅವರ ಕೆಲವು ವಿಶೇಷತೆಗಳಲ್ಲಿ ಸ್ಥಳದ ಪರಿಮಿತಿಯಿಂದ ಒಂದೆರಡನ್ನು ಇಲ್ಲಿ ದಾಖಲಿಸುವುದು ಅತ್ಯಂತ ಸೂಕ್ತವೆಂದು ಭಾವಿಸುವೆ.

**ಸರಳ ಬದುಕು :** ಈ ಮೊದಲೇ ಹೇಳಿದಂತೆ, ನಮ್ಮ ಸಂಸ್ಥೆಯ ಆವರಣದಲ್ಲೇ ಒಂದು ಸಣ್ಣ ಕೊಠಿಯಲ್ಲೇ ಅವರ ವಾಸ. ಒಂದು ಚಾಪೆ ಅದರ ಮೇಲೆ ಸುತ್ತಿಟ್ಟ ಹಾಸಿಗೆ. ಹಾಸಿಗೆಗೆ ಒರಗಿ ಕುಳಿತು ಎಲ್ಲರೊಂದಿಗೆ ಮಾತುಕತೆ. ಅವರ ಆಸ್ತಿ ಎಂದರೆ 3–4 ಜೊತೆ ಖಾದಿ ಪಂಚೆ, ಷರಟು, ಗಾಂಧೀ ಟೋಪಿ ಜೊತೆಗೆ ಒಂದಿಷ್ಟು ಪುಸ್ತಕಗಳು. ಕೊಠಡಿಯಲ್ಲಿ ಫ್ಯಾನ್ ಕೂಡ ಇಲ್ಲ, ಅಷ್ಟೇಕೆ ಅಧ್ಯಕ್ಷರಾಗಿದ್ದ ಅವರ ಕೊಠಡಿಯಲ್ಲೂ ಫ್ಯಾನ್ ಇಲ್ಲ. 'ಬೇಸಿಗೆಯಲ್ಲಿ ಸೆಕೆ ಆಗುವುದಿಲ್ಲವೇ ಸಾರ್' ಎಂದು ಒಮ್ಮೆ ಪ್ರಶ್ನಿಸಿದಾಗ 'ಈ ದೇಶದಲ್ಲಿ ಕೋಟ್ಯಂತರ ಜನರಿಗೆ ತಲೆಮೇಲೊಂದು ಸೂರೇ ಇಲ್ಲದೇ ಚಳಿ, ಮಳೆ, ಬಿಸಿಲು ಸಹಿಸಿಕೊಂಡಿರುವಾಗ ನನಗೆ ಫ್ಯಾನ್ ಮಾತ್ರ ಇಲ್ಲದಿದ್ದರೆ ಏನಾಯಿತಪ್ಪ ?' ಎಂಬ ಅವರ ಉತ್ತರ ನನ್ನ ಬಾಯಿ ಮುಚ್ಚಿಸಿ, ಕಣ್ತೆರೆಯಿಸಿತು !

**ಪ್ರೀತಿಯ ಸೆಲೆ :** ಸಂಸಾರಿಯಲ್ಲದಿದ್ದರೂ ಅವರದ್ದು ಸಾವಿರಾರು ಮಕ್ಕಳ ಸಂಸಾರ. ಅವರ ಅಧ್ಯಕ್ಷರ ಕಚೇರಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶ. ಅಲ್ಲಿ ಒಚಿಥಿ ಙ ಅಠಟಜ ಖಟಿ ಖುಡಿ ? ಎಂಬ ಪ್ರಶ್ನೆಯೇ ಇಲ್ಲ. ನಮ್ಮ ಪ್ರೈಮರಿ ಶಾಲೆಯ ಮಕ್ಕಳಿಗೆ ಐಸ್–ಪೈಸ್ ಆಟ ಆಡುವಾಗ ಬಚ್ಚಿಟ್ಟುಕೊಳ್ಳಲು ಅತ್ಯಂತ ಪ್ರಶಸ್ತವಾದ ಸ್ಥಳವೆಂದರೆ ಹೆಚ್. ಎನ್. ಅವರು ಕೂತಿದ್ದಾಗ ಅವರ ಕುರ್ಚಿ ಹಿಂಭಾಗ. 'ಯಾರಿಗೂ ಹೇಳ್ಬೇಡಿ ಸಾರ್' ಎಂಬ ಮಕ್ಕಳ ಸೂಚನೆಯನ್ನು ಶಿರಸಾವಹಿಸಿ ಪಾಲಿಸುತ್ತಿದ್ದುದು ಅವರಿಗೆ ಮಕ್ಕಳ ಮೇಲಿನ ಪ್ರೀತಿಗೆ ಸಾಕ್ಷಿ. ಒಮ್ಮೆ ಅವರು ನಮ್ಮ ಪ್ರೈಮರಿ ಶಾಲೆಗೆ ಹೋದಾಗ ಮಕ್ಕಳಿಗೆ ಊಟದ ಸಮಯ. ಎಲ್ಲಾ ಮಕ್ಕಳೂ ತಮ್ಮ ಡಬ್ಬಿ ತೆಗೆದು ತಿನ್ನುತ್ತಿದ್ದರೆ ಒಂದು ಮಗು ಮಾತ್ರ ಮೂಲೆಯಲ್ಲಿ ಮುಖ ಸಪ್ಪಗೆ ಮಾಡಿಕೊಂಡು ಕುಳಿತಿತ್ತು. ಅದನ್ನು ಕಂಡ ಹೆಚ್.ಎನ್.ರ ಕರುಳು ಚುರ್ ಎಂದಿತು. ಮರುದಿನದಿಂದಲೇ ಎಲ್ಲ ಬಡ ಮಕ್ಕಳಿಗೆ ಮಧ್ಯಾಹ್ನ ತಿಂಡಿ ವ್ಯವಸ್ಥೆ ಮಾಡಿದರು. ಇದು ಸರ್ಕಾರದ 'ಮಿಡ್ಡೇ ಮೀಲ್ಸ್' ಗಿಂತ ಮುಂಚಿನ ಪ್ರಸಂಗ.

ಗಾಂಧಿಜಯಂತಿಯಂದು ನಮ್ಮ ಹೈಸ್ಕೂಲ್ ಮಕ್ಕಳಿಗೆ ನಾವು ಬೆಳಗಿನ ಜಾವ ಪ್ರಭಾತ್ ಫೇರಿ ಏರ್ಪಡಿಸಿದ್ದ ಸಮಯದಲ್ಲಿ, ರಾತ್ರಿ ಶಾಲೆಯಲ್ಲೇ ನಮ್ಮೊಂದಿಗೆ ಅನೇಕ ಮಕ್ಕಳೂ ಮಲಗುತ್ತಿದ್ದರು. ಆಗ ತಣ್ಣೀರು ಸ್ನಾನ ಮಾಡುತ್ತಿದ್ದೆವು. ಅದನ್ನು ತಿಳಿದ ಹೆಚ್. ಎನ್. ನನ್ನನ್ನು ಕುರಿತು 'ಏನಪ್ಪಾ, ಈ ಮಕ್ಕಳಿಗೆ ತಣ್ಣೀರು ಒಗ್ಗುವುದಿಲ್ಲಪ್ಪ, ಹಾಸ್ಟೆಲ್‌ಗೆ ಬಂದು ಬಿಸಿ ನೀರೇ ಸ್ನಾನ ಮಾಡಲಿ' ಎಂದದ್ದು, ಪ್ರಭಾತ್ ಫೇರಿ ಮುಗಿಸಿ ಬಂದ ನಂತರ ಬನ್ನು, ಬಾಳೆಹಣ್ಣು ಕೊಡುವಂತೆ ತಿಳಿಸಿ ಅದಕ್ಕೆ ವ್ಯವಸ್ಥೆ ಮಾಡಿದ್ದು ಅವರ ಪ್ರೀತಿಯ ಸೆಲೆಗೆ ಸಾಕ್ಷಿ.

ಈ ಮೇಲಿನ ಘಟನೆಗಳಲ್ಲದೆ ಅವರ ಬಹುಮುಖೀ ಜೀವನವನ್ನು ಚಿತ್ರಿಸಲು ಪತ್ರಿಕೆಯ ಒಂದೆರಡು ಪುಟಗಳು ಸಾಲದು. ಮತ್ತೊಮ್ಮೆ ಅವರ ಜೀವನದ ಅನ್ಯಾನ್ಯ ಮುಖಗಳ ಬಗ್ಗೆ ಬರೆಯುತ್ತೇನೆ.

**ಜೂನ್ 6, ಹೆಚ್. ಎನ್. ಅವರ 96 ನೇ ಹುಟ್ಟು ಹಬ್ಬ. ತನ್ನಿಮಿತ್ತ ಅವರ ಬಗ್ಗೆ ಈ ಲೇಖನ.**

**ಹೆಚ್. ನಾಗಭೂಷಣ ರಾವ್**
ನಿವೃತ್ತ ಅಧ್ಯಾಪಕ
ನ್ಯಾಷನಲ್ ಹೈಸ್ಕೂಲ್
ಬೆಂಗಳೂರು



Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Posting 20th or 21st of every month



# ಅಭಿನಂದನೆಗಳು

ವಾಯುವ್ಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಶ್ರೀ ಅರುಣ್ ಶಹಾಪುರರಿಗೆ ಹಾರ್ದಿಕ ಅಭಿನಂದನೆಗಳು.

ಅರುಣ್ ಶಹಾಪುರರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರೂ ಹೌದು. ಅರುಣ್ ಶಹಾಪುರರು 2010 ರಲ್ಲಿ ವಿಧಾನ ಪರಿಷತ್ತಿಗೆ ಆಯ್ಕೆಯಾದಾಗಿನಿಂದ ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಹಾಗೂ ಶಿಕ್ಷಕರ ಸಮಸ್ಯೆಗಳಿಗೂ ಸ್ಪಂದಿಸಿ ಪರಿಹಾರ ತಂದುಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿರುತ್ತಾರೆ. ಅವರ ಕಾರ್ಯತತ್ಪರತೆ, ಉತ್ಸಾಹ, ಕ್ರಿಯಾಶೀಲತೆಗಳನ್ನು ಮನಗಂಡು ವಾಯುವ್ಯ ಶಿಕ್ಷಕ ಮಿತ್ರರು ಅರುಣ್ ಶಹಾಪುರರನ್ನು 2ನೇ ಬಾರಿಗೆ ಬೆಂಬಲಿಸಿದ್ದಾರೆ.

ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಬೆಟ್ಟದಷ್ಟು. ಶಹಾಪುರರು ಮುಂದಿನ 6 ವರ್ಷಗಳಲ್ಲಿ ಶಿಕ್ಷಕರ, ಶಿಕ್ಷಣದ ಸಮಸ್ಯೆಗಳನ್ನು ಸಮರ್ಥವಾಗಿ ಪರಿಹರಿಸುವ ಮಹತ್ತರ ಜವಾಬ್ದಾರಿ ಹೊಂದಿದ್ದಾರೆ. ಅದನ್ನು ಅವರು ಸಮರ್ಥವಾಗಿ ನಿರ್ವಹಿಸುತ್ತಾರೆಂಬ ವಿಶ್ವಾಸ ನಮ್ಮದು. ಶಿಕ್ಷಕರ ಪರ ಕಾಳಜಿ ಹೊಂದಿರುವ ತರುಣ ಅರುಣ್ ಶಹಾಪುರರ ಕೆಲಸಗಳಿಗೆ ಮುಂಬರುವ ದಿನಗಳಲ್ಲಿ ಯಶಸ್ಸು ಸಿಗಲಿ ಎಂಬುದು ನಮ್ಮೆಲ್ಲರ ಸದಾಶಯ.

# ಮೈಸೂರಿನಲ್ಲಿ ನಡೆದ ಅಖಿಲ ಭಾರತೀಯ ಕಾರ್ಯಕರ್ತರ ಅಭ್ಯಾಸವರ್ಗ










IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 060-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com